ಕೆಲಸ ಮಾಡದೇ ಇವತ್ತು ಆಹಾರ ಧಾನ್ಯ ಉಪಯೋಗವಾಗಿಲ್ಲ. ಮಾನ್ಯ ಸದಾನಂದಗೌಡರು ಮತ್ತು ನಮ್ಮ ಶೆಟ್ಟರ್‌ರವರು ನೀವು ಆಹಾರ ಧಾನ್ಯಗಳನ್ನು ಉಪಯೋಗಿಸಿಕೊಳ್ಳುತ್ತಿಲ್ಲ ಎಂದರು. ಈ ಕಡಿವಾಣದಿಂದ ಅದು ಸಾಧ್ಯವಾಗುತ್ತಿಲ್ಲ. ಅದಕ್ಕೆ ನಾನು ಹೇಳುವುದು, ಆಂಧ್ರ ಪ್ರದೇಶದಲ್ಲಿ ಯಾವ ಪರಿಸ್ಥಿತಿ ಇದೆಯೋ? ಅವರಿಗೇನು ನಿಯಮಗಳನ್ನು ಹಾಕಿದ್ದಾರೋ ನಮಗೆ ಗೊತ್ತಿಲ್ಲ. ಆದರೆ ನಮ್ಮ ರಾಜ್ಯಕ್ಕೆ ಹಾಕಿರುವಂತಹ ನಿಯಮಗಳನ್ನು ಸಡಿಲ ಮಾಡುವಂತಹ ಕಾರ್ಯ ಮಾಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳು ಅಧಿಕಾರಿಗಳಿಗೆ ಹೇಳಬೇಕಾಗುತ್ತದೆ. ಅವರು ಆ ಬಗ್ಗೆ ಅಧ್ಯಯನ ಮಾಡುವಂಥದ್ದಾದರೂ ಆಗಬೇಕಾಗುತ್ತದೆ. ಮಾನ್ಯ ಮುಖ್ಯಮಂತ್ರಿಗಳು ಎಲ್ಲಾ ಕೆಲಸ ಆಗಲಿ, ರಾಜ್ಯದಲ್ಲಿ ನೀವು ಆಹಾರ ಧಾನ್ಯಗಳನ್ನು ಉಪಯೋಗಿಸಿಕೊಳ್ಳಿ, ಅಸೆಟ್ ಕ್ರಿಯೇಟ್ ಆಗಲಿ, ಮಿಸ್‌ಯೂಸ್ ಆಗಬಾರದು, ಆಗಿದ್ದರೆ ಅಂತಹವರ ಮೇಲೆ ಜಿಲ್ಲಾಡಳಿತ ಕ್ರಮ ತೆಗೆದುಕೊಳ್ಳಲಿ ಎಂದು ಹೇಳಲಿ, ತಾಲ್ಲೂಕಿನ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಂಡು ಅದನ್ನು ಬಿಗಿ ಮಾಡಿದಾಗ ಇದೆಲ್ಲಾ ಸರಿ ಹೋಗುತ್ತದೆ. ಆ ದೃಷ್ಟಿಯಿಂದ ಈ ಕಾರ್ಯ ಆಗಬೇಕಾಗುತ್ತದೆ ಎಂದು ತಿಳಿಸಬಯಸುತ್ತೇನೆ. ಮಾನ್ಯ ಉಪಾಧ್ಯಕ್ಷರೇ, ತಾವು ನನಗೆ ಮಾತನಾಡಲು ಹೆಚ್ಚು ಸಮಯವನ್ನು ಕೊಟ್ಟಿದ್ದೀರಿ. ಅದಕ್ಕಾಗಿ ನಾನು ತಮಗೆ ವಂದಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

11. ಅಧ್ಯಕ್ಷರ ಅಪ್ಪಣೆ ಮೇರೆಗೆ

ವಿಷಯ: ರೇಷ್ಮೆ ರೀಲರ್ಸ್‌ಗಳ ಮುಷ್ಕರದಿಂದ ಉಂಟಾಗಿರುವ ಸಮಸ್ಯೆ ಬಗ್ಗೆ.

+ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ): ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ಈ ಸದನದಲ್ಲಿ ಮಾನ್ಯ ಬೈರೇಗೌಡರು ಒಂದು ವಿಚಾರವನ್ನು ಪ್ರಸ್ತಾಪ ಮಾಡಿದರು. ಈ ವಿಚಾರ ತುರ್ತಾಗಿ ಈ ಕ್ಷಣವೇ ಆಗಬೇಕಾಗಿರುವುದರಿಂದ ಈ ಸಮಸ್ಯೆಯನ್ನು ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಾನ್ಯ ರೇಷ್ಮೆ ಇಲಾಖೆ ಸಚಿವರ ಗಮನಕ್ಕೆ ತರಬೇಕೆಂದು ಪ್ರಸ್ತಾಪ ಮಾಡುತ್ತಿದ್ದೇನೆ. ನಮ್ಮ ರಾಜ್ಯದಲ್ಲಿ ಸುಮಾರು 12ರಿಂದ 13 ಸಾವಿರ ಜನ ರೀಲರ್ಸ್ ಇದ್ದರು. ರೇಷ್ಮೆ ಗೂಡನ್ನು ತೆಗೆದುಕೊಂಡು ಅದರಿಂದ ದಾರ ಮಾಡತಕ್ಕಂಥ ಕೆಲಸವನ್ನು ಇವರು ಮಾಡುತ್ತಿದ್ದರು. ಇವರು ಮೂರೂವರೆಯಿಂದ ಏಳೂವರೆ ಕೋಟಿ ರೂಪಾಯಿ ಬಡ್ಡಿ ಮನ್ನಾ ಆಗಬೇಕೆನ್ನುವ ಬೇಡಿಕೆಯನ್ನು ಮೂರ್ನಾಲ್ಕು ವರ್ಷಗಳಿಂದ ಇಟ್ಟುಕೊಂಡು ಬಂದಿದ್ದಾರೆ. ನಮ್ಮ ಸರ್ಕಾರ ಇದ್ದಾಗ ಆಫ್ಲೈ ಆಗಿತ್ತೇ ಹೊರತು ಹಣ ಬಿಡುಗಡೆ ಆಗಿರಲಿಲ್ಲ. ಇದುವಾಸ್ತವಾಂಶ. ಕಳೆದ 2-3 ವರ್ಷಗಳಿಂದ ಅವರ ಬೇಡಿಕೆ ಈಡೇರಲಿಲ್ಲವೆಂದು ಅವರು ಆರನೇ ತಾರೀಖಿನಿಂದ ನಾವು ಧರಣಿ ಮಾಡುತ್ತೇವೆಂದು, ಗೂಡನ್ನು ಕೊಳ್ಳುವುದಿಲ್ಲವೆಂದು ಹೇಳಿದ್ದಾರೆ. ನಿನ್ನೆ ಮಾನ್ಯ ರೇವಣ್ಣನವರು, ಅವರನ್ನು ಕರೆಸಿ ನಾನು ಮಾತನಾಡುತ್ತೇನೆ ಹಾಗೂ ಅವರ ಸಮಸ್ಯೆಗಳನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ, ಎರಡೂವರೆ ಕೋಟಿ ರೂಪಾಯಿ ಹಣವನ್ನು ತತ್ವಶಃ ಸರ್ಕಾರ ಒಪ್ಪಿದೆ ಎನ್ನುವ ಮಾತನ್ನು ಸದನದಲ್ಲಿ ಅವರು ಹೇಳಿದರು. ಆದರೆ ಇವತ್ತು ಏನಾಗಿದೆ ಎಂದರೆ ರೀಲರ್ಸ್ ಮಾರುಕಟ್ಟೆಯಲ್ಲಿ ಯಾವುದೇರೇಷ್ಮೆ ಗೂಡನ್ನು ಬೆಳಿಗ್ಗೆಯಿಂದ ಕೊಂಡುಕೊಂಡಿಲ್ಲ. ಅದು ಚಾಮರಾಜನಗರ ಚನ್ನಪಟ್ಟಣ, ರಾಮನಗರ, ಕನಕಪುರ, ವಿಜಯಪುರ, ಕೋಲಾರ ಹಾಗೂ ಶಿಡ್ಲಘಟ್ಟ ಹೀಗೆ ಸುಮಾರು 12 ರಿಂದ 14 ಕಡೆ ಮಾರುಕಟ್ಟೆಗಳಲ್ಲಿ ಬೆಳಿಗ್ಗೆಯಿಂದ ರೀಲರ್ಸ್ ಗೂಡನ್ನು ಪರ್‌ಚೇಸ್

ಮಾಡಿಲ್ಲ. ನಾನು ಈಗತಾನೆ ಒಂದು ಮದುವೆಗೆಂದು ಕನಕಪುರಕ್ಕೆ ಹೋಗಿದ್ದೆ, ಅಲ್ಲಿ ರೈತರು ರಸ್ತೆ ತಡೆ ಮಾಡಿದ್ದಾರೆ. ರೈತ ಬೆಳಿಗ್ಗೆ ನಾಲ್ಕು ಗಂಟೆಗೆ ಎದ್ದು ಗೂಡನ್ನು ಮಾರುಕಟ್ಟೆಗೆ ತರುತ್ತಾನೆ. ಒಂದು ದಿನಕ್ಕೆ ಕರ್ನಾಟಕದಲ್ಲಿ 70 ಲಕ್ಷ ರೂಪಾಯಿಯಿಂದ ಒಂದು ಕೋಟಿ ರೂಪಾಯಿಯವರೆಗೂ ಖರ್ಚಾಗತಕ್ಕಂಥ ಗೂಡನ್ನು ಉತ್ಪಾದನೆ ಮಾಡಿ ಮಾರುಕಟ್ಟೆಗೆ ತೆಗೆದುಕೊಂಡು ಬರುತ್ತಾರೆ. ಆ ಗೂಡು ಬೇರೆ ವಸ್ತುಗಳ ಹಾಗೆ ಒಂದೆರಡು ದಿನದಿಂದ ಎರಡು ವಾರದವರೆಗೆ ಇಡುವುದಕ್ಕಾಗುವುದಿಲ್ಲ. ಬಹಳ ಹೊತ್ತೆಂದರೆ 24 ಗಂಟೆ ಕಾಲ ಇಡಬಹುದು. ನಿನ್ನೆ ಮಧ್ಯಾಹ್ನ ರೈತರು ಚಂದ್ರಿಕೆಯಿಂದ ಗೂಡನ್ನು ತೆಗೆದು ರಾತ್ರಿಯೆಲ್ಲಾ ಪ್ಯಾಕ್ ಮಾಡಿ ಬೆಳಿಗ್ಗೆ ನಾಲ್ಕು ಗಂಟೆಗೆ ಮಂಕರಿಯಲ್ಲಿ ಗೂಡನ್ನು ತೆಗೆದುಕೊಂಡು ಮಾರುಕಟ್ಟೆಗೆ ಆರೇಳು ಗಂಟೆಗೆ ತಂದಿರುತ್ತಾನೆ. ಅದನ್ನು ಹನ್ನೆರಡು ಗಂಟೆಯೊಳಗೆ ತೆಗೆದುಕೊಳ್ಳದೆ ಹೋದರೆ ಪ್ರತಿನಿತ್ಯ ಸುಮಾರು 70 ಲಕ್ಷದಿಂದ ಒಂದು ಕೋಟಿ ರೂಪಾಯಿ ಗೂಡನ್ನು ಬೀದಿಗೆ ಚೆಲ್ಲುವಂತಹ ಸನ್ನಿವೇಶ ಬರುತ್ತದೆ. ಅಷ್ಟೇ ಅಲ್ಲ ಇದು ಕಾನೂನು ಸುವ್ಯವಸ್ಥೆ ಕಾಪಾಡುವುದಕ್ಕೆ ಆಗದೆ ಇರುವಂತಹ ಒಂದು ಸನ್ನಿವೇಶ ಬರುತ್ತದೆಂದು ಮಾನ್ಯ ಮುಖ್ಯಮಂತ್ರಿಗಳಿಗೆ ತಿಳಿಸುತ್ತಿದ್ದೇನೆ. ಬಹಳ ಸೂಕ್ಷ್ಮವಾಗಿ ಈ ಮಾತನ್ನು ಇಲ್ಲಿಗೆ ನಿಲ್ಲಿಸುತ್ತೇನೆ. ತಮಗೆ ಇದರ ಅಂತರಾಳ ಏನು ಎಂಬುದು ಗೊತ್ತಿದೆ. ಆದರೆ ನಾನು ವಿಶೇಷವಾಗಿ ಮಾನ್ಯ ಮುಖ್ಯಮಂತ್ರಿಗಳಲ್ಲಿ ಮನವಿ ಮಾಡಿಕೊಳ್ಳುವುದೇನೆಂದರೆ ದಯವಿಟ್ಟು ರೈತರು ಬಹಳ ಸಂಕಷ್ಟದಲ್ಲಿದ್ದಾರೆ. ಒಂದು ಕೋಟಿ ಜನರಿಗೆ ರಾಜ್ಯದಲ್ಲಿ ರೇಷ್ಮೆ ಉದ್ಯಮ ಕೆಲಸ ಕೊಟ್ಟಿದೆ. ನನಗೆ ಗೊತ್ತಿದೆ ಇಲ್ಲಿ ಬೇರೆ ಬೇರೆ ವಿಚಾರಗಳನ್ನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ನೀವು ಇಲಾಖಾ ಮಂತ್ರಿಗಳಾದಮೇಲೆ, ಮಹದೇವು ಅವರು ಆದಮೇಲೆ ಆಗಿರತಕ್ಕಂಥ ಕೆಲಸಗಳು ಏನಿವೆ ಅದರ ಬಗ್ಗೆ ನಾನು ಪ್ರಸ್ತಾಪ ಮಾಡುವುದಕ್ಕೆ ಹೋಗುವುದಿಲ್ಲ. ಈಗ ತಕ್ಷಣ ಆಗಬೇಕಾಗಿರುವುದೆಂದರೆ ಹನ್ನೆರಡು ಗಂಟೆ ಒಳಗಡೆ ಮಾರುಕಟ್ಟೆಯಲ್ಲಿ ಇರುವಂತಹ ಗೂಡನ್ನು ನೀವು ತೆಗೆದುಕೊಳ್ಳಬೇಕು. ಈಗ ಕೆಎಸ್ಐಸಿ ಯುನಿಟ್ ಇದ್ದಿದ್ದರೆ ಕನಿಷ್ಟ ನಾಲ್ಕೈದು ದಿವಸ ಇಟ್ಟುಕೊಂಡು ಅದನ್ನು ಸ್ಟೋರ್ ಮಾಡಿ ನಂತರ ಬೇಯಿಸಿ ಅದನ್ನು ಎಂಟತ್ತು ದಿವಸ ಇಡಬಹುದಾಗಿತ್ತು. ಅದನ್ನು ಬೇಯಿಸಿಟ್ಟಿದ್ದರೆ, ಗೂಡನ್ನು ಚಿಟ್ಟೆಗಳು ಸತ್ತು ಹೋಗುತ್ತವೆ. ಗೂಡು ಹಾಗೆ ಇರುತ್ತಿತ್ತು. ಆದರೆ ಇವತ್ತು ಆ ಪರಿಸ್ಥಿತಿ ಇಲ್ಲ. ಆದ್ದರಿಂದ ದಯಮಾಡಿ ಮಾನ್ಯ ಮುಖ್ಯಮಂತ್ರಿಗಳು ಇದರಲ್ಲಿ ಇಂಟರ್‌ವೀನ್ ಆಗಿ ಹಣವನ್ನು ತಕ್ಷಣ ಬಿಡುಗಡೆ ಮಾಡಬೇಕು. ಆ ರೀಲರ್ಸ್ ಬೇಡಿಕೆ ಬಿಡ್ಡಿ ಮನ್ನಾ ಮಾಡುವುದು ಹಾಗೂ ಆಡಳಿತಾತ್ಮಕ ದೃಷ್ಟಿಯಿಂದ ಇರತಕ್ಕಂಥ ಬೇಡಿಕೆಗಳು ಏನಿವೆ ಅದನ್ನು ನೀವು ಅವರು ಕುಳಿತುಕೊಂಡು ಚರ್ಚೆ ಮಾಡಿ ಅದನ್ನು ಬಗೆಹರಿಸುವುದಕ್ಕೆ ಪ್ರಯತ್ನ ಮಾಡಿ. ಆದರೆ ಹಣ ಬಿಡುಗಡೆಯಾಗತಕ್ಕಂಥ ವಿಚಾರ ಏನಿದೆ ಅದು ಆಗಬೇಕು. ಅದು ಆಗದೇ ಹೋದರೆ ನಾನು ಸರ್ಕಾರದ ಗಮನಕ್ಕೆ ತರುತ್ತಿದ್ದೇನೆ, ಈ ಕ್ಷಣದಿಂದ ಸುಮಾರು ಐದಾರು ಜಿಲ್ಲೆಗಳಲ್ಲಿ ರೈತರು ಬೀದಿಗೆ ಇಳಿದಿದ್ದಾರೆ. ನಾವ್ಯಾರು ಇದಕ್ಕೆ ಎತ್ತಿಕಟ್ಟಿಲ್ಲ. ನಾವ್ಯಾರೂ ಕೂಡ ರೈತರಿಗೆ ಧರಣಿ ಮಾಡಿ, ಸತ್ಯಾಗ್ರಹ ಮಾಡಿ, ರಸ್ತೆ ಚಳುವಳಿ ಮಾಡಿ, ಬಸ್ಸುಗಳನ್ನು ನಿಲ್ಲಿಸಿ ಎಂದು ಹೇಳಿಲ್ಲ. ವಿದ್ಯುಚ್ಛಕ್ತಿ ಇಲ್ಲ, ನೀರಿಲ್ಲ, ಅದರಲ್ಲೂ ಅವರು ಕಷ್ಟಪಟ್ಟು ಬೆಳೆದಿರತಕ್ಕಂಥ ಗೂಡನ್ನೂ ಕೂಡ ತೆಗೆದುಕೊಳ್ಳುವುದಿಲ್ಲಪೆಂದರೆ ಅವರು ಏನು ಮಾಡಬೇಕು? ಸರ್ಕಾರದ ಹತ್ತಿರ ಪರ್ಯಾಯ ವ್ಯವಸ್ಥೆ ಇಲ್ಲ. ನೀವು ಇದಕ್ಕೆ ಏನಾದರೂ ತಯಾರಿ ಮಾಡಿಕೊಂಡಿದ್ದರೆ, ನನಗೆ ಗೊತ್ತಿದ್ದ ಹಾಗೆ ನೀವು ತಯಾರಿ ಮಾಡಿ ಕೊಳ್ಳುವುದಕ್ಕೆ

ಆಗಿಲ್ಲ. ನೀವು ಗೂಡನ್ನು ತೆಗೆದುಕೊಂಡು ಅದಕ್ಕೆ ಬೇಕಾಗಿರತಕ್ಕಂಥ ಬ್ಯಾಂಕ್ ಫೈನಾನ್ಸ್ ಅನ್ನು ಅರೇಂಜ್‌ಮೆಂಟ್ ಮಾಡಿ, ಆ ಗೂಡನ್ನು ಬೇಯಿಸಿ ಅದನ್ನು ಎಂಟು ದಿವಸ ಇಡುವಂತಹ ಶಕ್ತಿ ನಿಮಗೆ ಇದ್ದಿದ್ದರೆ ಅದನ್ನು ನಾನು ಅಪ್ರೀಷಿಯೇಟ್ ಮಾಡುತ್ತಿದ್ದೆ. ಅದೂ ಆಗಿಲ್ಲ ಇಲ್ಲಿ ಇರತಕ್ಕಂಥ ಅನೇಕ ಶಾಸಕರಾದ ಮಾನ್ಯ ಮಹದೇವಪ್ರಸಾದ್ ಮಾನ್ಯ ಚಿನ್ನಿಗಪ್ಪ, ಮಾನ್ಯ ವೈಕೆ. ರಾಮಯ್ಯ ಅವರ ಏರಿಯೂ ಸೇರಿದಂತೆ ಏಳೆಂಟು ಜಿಲ್ಲೆಗಳಲ್ಲಿ ನಮಗೆ ಉಳಿದಿರುವುದು ಅದೊಂದೇ ಆದುದರಿಂದ ಮಾನ್ಯ ಮುಖ್ಯಮಂತ್ರಿಗಳು ಆ ಒಂದು ಹಣಕಾಸನ್ನು ಬಿಡುಗಡೆ ಮಾಡುವುದರ ಮೂಲಕ ರೈತರಿಗೆ ಸಹಾಯಕ್ಕೆ ತತ್‌ಕ್ಷಣ ಬರಬೇಕೆಂದು ಹೇಳುತ್ತಾ, ಅವೇಳೆಯಾದರೂ ಸಹ ಇದು ಜ್ವಲಂತ ಸಮಸ್ಯೆಯಾಗಿರುವುದರಿಂದ ಸರ್ಕಾರದ ಗಮನಕ್ಕೆ ತಂದಿದ್ದೇನೆ.

+ಶ್ರೀ ಸಿ. ಬೈರೇಗೌಡ (ವೇಮಗಲ್): ಮಾನ್ಯ ಉಪಾಧ್ಯಕ್ಷರೆ, ನಿನ್ನೆ ದಿವಸ ನಾನು ಹೇಳಿದೆ. ಅದಕ್ಕೆ ಪರ್ಯಾಯ ವ್ಯವಸ್ಥೆ ಏನು ಮಾಡಿದ್ದೀರಿ ಎಂದರೆ ಅದಕ್ಕೆ ತಾವು ನಿನ್ನೆ ದಿವಸ ಉತ್ತರ ಕೊಡಲಿಲ್ಲ. ಮತ್ತೆ ತಾವು ಉತ್ತರ ಕೊಡುವಂತಹ ಸಂದರ್ಭದಲ್ಲಿ ಮಾನ್ಯ ಮುಖ್ಯ ಮಂತ್ರಿಗಳು ಇಲ್ಲಿ ಇರಲೇಬೇಕಾಗುತ್ತದೆ ಎಂದು ತಮ್ಮಲ್ಲಿ ಕೂಡ ಉತ್ತರ ಕೊಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ನಾನು ಹೇಳಿದ್ದೇನೆ. ಆದರೆ ಅವರು ನಿನ್ನೆ ಇರಲಿಲ್ಲ. ಎಲ್ಲಾ ಸಂದರ್ಭದಲ್ಲಿ ಅವರು ಇಲ್ಲಿ ಇರಬೇಕೆಂದು ಬಯಸುವುದು ಸರಿಯಲ್ಲ. ಆದರೆ ಈಗ ಇಲ್ಲಿ ಮಾನ್ಯ ಮುಖ್ಯಮಂತ್ರಿಗಳು ಇದ್ದಾರೆ. ಇದು ಬಹಳ ತೀವ್ರತರವಾದಂತಹ ಸಮಸ್ಯೆ. ಬಹಳ ಮುಖ್ಯವಾಗಿರತಕ್ಕಂಥಾದ್ದು ಅವರ ಬಡ್ಡಿ ಮನ್ನಾ ವಿಚಾರದಲ್ಲಿ ನಾನು ನಿನ್ನೆ ನೇರವಾಗಿ ಹೇಳಿದ್ದೇನೆ. ಮುಖ್ಯವಾಗಿ ಕೆಲವು ಒಂದೆರಡು ಸಂಸ್ಥೆಗಳ ಮೂಲಕ ಅದೂ ಅಧಿಕೃತವಾದ ಸಂಸ್ಥೆಗಳಾದ ಕೆಎಸ್‌ಎಫ್‌ಸಿ, ಇಂಡಸ್ಟ್ರೀಯಲ್ ಕೋ ಆಪರೇಟೀನ್ ಬ್ಯಾಂಕ್, ರೀಲರ್ಸ್ ಕೋ-ಆಪರೇಟೀವ್ ಸೊಸೈಟಿ ಮತ್ತು ಬೇರೆ ಬೇರೆ ಅಧಿಕೃತ ಹಣಕಾಸಿನ ಸಂಸ್ಥೆಗಳ ಮೂಲಕ ಮಾಡಿರತಕ್ಕಂಥ ಸಾಲದ ಮೇಲಿನ ಬಡ್ಡಿಯನ್ನು ಈ ನಿಮಿಷದವರೆಗೂ ಕೂಡ ವಜಾಮಾಡಿಲ್ಲ ನಮ್ಮ ಸರ್ಕಾರವಿದ್ದಾಗ ಅವಧಿ ಹಾಕುವಂತಹ ವಿಚಾರ ಮಾಡಿದ್ದೇವೆ. ಈಗ ಆ ಅವಧಿಯನ್ನು ತೆಗೆದು ಹಾಕಿ ಈಗ ಇರತಕ್ಕಂಥ ಎಲ್ಲಾ ಸಾಲದ ಮೇಲಿನ ಬಡ್ಡಿಯನ್ನು ತಾವು ವಜಾ ಮಾಡಬೇಕು. ಮತ್ತು ಅವರ ಇನ್ನೊಂದು ಬೇಡಿಕೆ ಏನಿದೆ ಎಂದರೆ 2004ನೇ ಇಸವಿಯವರೆಗೆ ಅವಧಿ ವಿಸ್ತರಿಸಬೇಕೆಂದು ಹೇಳಿದ್ದಾರೆ. ಇದರ ವಿಚಾರದಲ್ಲಿ ಮುಖ್ಯವಾಗಿರತಕ್ಕಂಥ ಬೇಡಿಕೆ ಬಗ್ಗೆ ನಿನ್ನೆ ಕರೆಸಿ ಮಾತನಾಡುತ್ತೇವೆಂದು ಹೇಳಿದರಿ. ಆದರೆ ಮಾತನಾಡಿದ್ದಿರೋ ಇಲ್ಲವೋ ಎಂಬುದು ನನಗೆ ಗೊತ್ತಿಲ್ಲ. ಈಗ ಎಲ್ಲಾ ಕಡೆ ಕೂಡ ಮಾರುಕಟ್ಟೆಗಳಲ್ಲಿ ಹರಾಜು ಇಲ್ಲದೆ ಅಲ್ಲಿ ಯರೂ ಕೂಡ ಹೋಗಿಲ್ಲ. ಇವತ್ತು ಇದರಿಂದ ರೈತರ ಪರಿಸ್ಥಿತಿ ಏನಾಗಿದೆ? ಇವತ್ತು ಕೆಲವು ಕಡೆ ರಸ್ತೆ ತಡೆ ಮಾಡತಕ್ಕಂಥ ಕೆಲಸವನ್ನು ಮಾಡಿದ್ದಾರೆಂದು ಮಾನ್ಯ ಸ್ನೇಹಿತರಾದ ಸಿಂಧ್ಯರವರು ಹೇಳಿದ್ದಾರೆ. ಇದನ್ನು ಇವತ್ತು ನೀವು ಬಗೆಹರಿಸದೆ ಇದ್ದರೆ ನಾಳೆ ದಿವಸ ಏನೇ ಆಗಲಿ ನಾವೇ ಬೀದಿಗೆ ಇಳಿಯಬೇಕಾಗುತ್ತದೆ. ರಸ್ತೆ ತಡೆಯಬೇಕಾಗುತ್ತದೆ. ವಿಧಾನಸೌಧಕ್ಕೆ ಬರುವಂಥಾದ್ದೂ ಕೂಡ ತಡೆಯಬೇಕಾಗುತ್ತದೆ. ನಾವು ಎಲ್ಲಾದಕ್ಕೂ ಕೂಡ ತಯಾರಿದ್ದೇವೆ. ರೈತರು ತಡೆ ಮಾಡುತ್ತಿದ್ದು, ಹೊಟ್ಟೆಯಲ್ಲಿ ಬೆಂಕಿ ಬಿದ್ದಿರತಕ್ಕಂಥ ಸಂದರ್ಭದಲ್ಲಿ ನಾವು ಇಲ್ಲಿ ಸುಮ್ಮನೆ ಕುಳಿತುಕೊಳ್ಳುವುದಕ್ಕೆ ಆಗುವುದಿಲ್ಲ. ನಾನು ಒಬ್ಬ ಬೆಳೆಗಾರನಾಗಿ ಹೇಳುತ್ತಿದ್ದೇನೆ, ಆ ನೋವು ಕಷ್ಟ ಅನುಭವಿಸಿರುವ ಕಾರಣ ಅದನ್ನು ತೀವ್ರವಾಗಿ ಸರ್ಕಾರಕ್ಕೆ ತಿಳಿಸುತ್ತಿದ್ದೇನೆ. ನಮ್ಮ ಹಾಗೂ ರೈತರ ಭಾವನೆಗಳನ್ನು

ಅರ್ಥ ಮಾಡಿಕೊಳ್ಳಿ. ತತ್‌ಕ್ಷಣ ನೀವು ಕಾರ್ಯರೂಪಕ್ಕೆ ಬರಬೇಕಾಗಿರತಕ್ಕಂಥಾದ್ದು ಅತೀ ಅವಶ್ಯಕವಿದೆ. ಮಾನ್ಯ ಮುಖ್ಯಂತ್ರಿಗಳು ಇದನ್ನು ಗಮನಿಸಬೇಕು ಎಂದು ಮನವಿಯನ್ನು ಈ ಸಂದರ್ಭದಲ್ಲಿ ಮಾಡುತ್ತಾ, ತಮಗೆ ಮಾತನಾಡುವುದಕ್ಕೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ): ಮಾನ್ಯ ಉಪಾಧ್ಯಕ್ಷರೆ, ಮಾನ್ಯ ಸಿಂಧ್ಯರವರು ಹೇಳಿದ ಹಾಗೆ ಇದು ಹೊಸದಲ್ಲ. ಅನೇಕ ಸಂದರ್ಭದಲ್ಲಿ ಇಂತಹ ಪರಿಸ್ಥಿತಿ ಉದ್ಭವವಾಗಿದೆ. ಶಾಶ್ವತವಾಗಿ ಸಮಸ್ಯೆಯಾದಾಗ ನಮ್ಮ ಸ್ನೇಹಿತರು ಹೇಳಿದ ಹಾಗೆ ಸರ್ಕಾರ ಅನೇಕ ರೇಷ್ಮೆ ದಾರ ಬಿಚ್ಚುವಂತಹ ಹೊಸ ಕೇಂದ್ರಗಳನ್ನು ಮೈಸೂರಿನಲ್ಲಿ ತೆರೆದರು. ಈ ಎಲ್ಲಾ ಫಿಲೀಚರ್ ಪ್ರತಿವರ್ಷ ಕೂಡ ನಷ್ಟವನ್ನು ಅನುಭವಿಸುತ್ತಿದ್ದೇವೆ. ಆದರೂ ಕೂಡ ಇವನ್ನು ನಾವು ನಡೆಸಿಕೊಂಡು ಬರುತ್ತಿದ್ದೇವೆ. ಕಾರಣವೇನೆಂದರೆ ಈ ದಾರ ಬಿಚ್ಚುವಂತಹ ಜನರು ರೈತರಿಗೆ ಮೋಸ ಮಾಡುತ್ತಾರೆ, ಕೊಂಡುಕೊಳ್ಳದೆ ಥ್ರೆಟನ್ ಮಾಡುತ್ತಾರೆ ಬಾರ್ಗೇನ್ ಮಾಡುತ್ತಾರೆ ಬ್ಲಾಕ್‌ಮೇಲ್ ಮಾಡುತ್ತಾರೆ ಎನುವಂತಹ ಸಂದರ್ಭದಲ್ಲಿ government should intervene and purchase. ಇದು ಮೊದಲಿನಿಂದಲೂ ನಡೆಸಿಕೊಂಡು ಬಂದಿರತಕ್ಕಂಥಾದ್ದು. ಈಗಲೂ ಕೂಡ ಇದನ್ನು ಈಗ ಮಾಡಲೇಬೇಕಾಗುತ್ತದೆ. ಇದನ್ನು ಅವರು ಹೇಳುತ್ತಾರೆ, ನಾನು ಹೇಳುತ್ತೇನೆ. ಇನ್ನೊಬ್ಬರು ಹೇಳುತ್ತಾರೆ ಎನ್ನುವ ಪ್ರಶ್ನೆ ಅಲ್ಲ. ಇದನ್ನು ನಾವು 24 ಗಂಟೆಗಿಂತ ಹೆಚ್ಚಿಗೆ ಇಟ್ಟುಕೊಳ್ಳುವುದಕ್ಕೆ ಸಾಧ್ಯವಿಲ್ಲ. ಅದರ ನೋವನ್ನು ಅನುಭವಿಸಿದವರಿಗೆ ಗೊತ್ತಾಗುತ್ತದೆ. ನಾನು ಇವತ್ತು ಬೆಳಿಗ್ಗೆ ಎದ್ದು ಮೈಸೂರಿನಿಂದ ಬರುತ್ತಿದ್ದೆ. ನಾನು ಎಲ್ಲಾದರೂ ಹೋದರೆ ರೇಷ್ಮೆಯಲ್ಲಿ ಆಸಕ್ತಿ ಇದೆ ಎಂದು ಆ ಕಡೆಯಿಂದ ಬರುತ್ತಿದ್ದಾಗ ಎಂಟು ಕಿಲೋಮಿಟರ್‌ನಲ್ಲಿ ಒಬ್ಬ ರೈತ ತನ್ನ ಮನೆಗೆ ಕರೆದುಕೊಂಡು ಹೋದ. ಆ ಗೂಡನ್ನು ನೋಡಿ ನನಗೆ ಅಷ್ಟೊಂದು ಸಂತೋಷವಾಯಿತು. ಅವು ಕಡ್ಲೆಕಾಯಿ ಇದ್ದಹಾಗೆ ಇದ್ದವು. ನಾನು ಖುಷಿ ಪಡುತ್ತಿದ್ದರೆ ಅವನು ನೋವು ಪಡುತ್ತಿದ್ದ. 70 ಮೊಟ್ಟೆಗೆ 90 ಕೆ.ಜಿ. ಗೂಡು ಬೆಳೆದಿದ್ದಾನೆ. ಅಷ್ಟು ಸಂತೋಷವಾಗಿದೆ ನನಗೆ. ಆದರೆ ಅವನು ನೋವು ಅನುಭವಿಸುತ್ತಿದ್ದಾನೆ. ಏಕೆಂದರೆ, ಅವನು ನಾನು ಇಷ್ಟು ಚೆನ್ನಾಗಿ ಬೆಳೆದಿದ್ದೇನೆ, ಇದನ್ನು ಎಲ್ಲಿ ತೆಗೆದುಕೊಂಡು ಹೋಗಲಿ ಎಂದ? ಏಕೆ ಎಂದು ಮುಂದಕ್ಕೆ ಬಂದರೆ ನನ್ನ ಕಾರನ್ನೂ ಸಹ ಅಡ್ಡ ಹಾಕಿದ್ದಾರೆ. ಈಗಿರುವಂತಹ ಪರಿಸ್ಥಿತಿ ಅತ್ಯಂತ ಗಂಭೀರವಾಗಿದೆ. ಯಾವಾಗ ರೈತನಿಗೆ ಕಷ್ಟ ಬರುತ್ತದೆ, ಯಾವಾಗ ಕೊಂಡುಕೊಳ್ಳುವವನಿಂದ ತೊಂದರೆಯಾಗುತ್ತದೋ ಅಂತಹ ಎಲ್ಲಾ ಸಂದರ್ಭದಲ್ಲಿ ನೀವು ಇಂಟರ್‌ವೀನ್ ಆಗಿ ಗೂಡನ್ನು ಕೊಂಡುಕೊಂಡು ಸರ್ಕಾರಿ ದಾರ ಬಿಚ್ಚುವ ಕೇಂದ್ರದಲ್ಲಿ ದಾರ ಬಿಚ್ಚುವಂತಹ ಪದ್ಧತಿ ಮೊದಲನಿಂದಲೂ ನಡೆದುಕೊಂಡು ಬಂದಿದೆ. ಈಗ ಬೇರೆ ಅನ್ಯ ಮಾರ್ಗವಿಲ್ಲ, ನಾನೂ ನಮ್ಮ ಸ್ನೇಹಿತರ ಜೊತೆಗೆ ಸೇರಿಕೊಂಡು, ಅವರಿಗೆ ಬಡ್ಡಿ ಮನ್ನಾ ಮಾಡುವುದು, ಸಾಲ ಮನ್ನಾ ಮಾಡುವುದು, ರೈತರಿಗೆ, ಸೀರೆ ಮಾಡುವವರಿಗೆ ಮಾಡುವುದು, ಅದನ್ನು ಯಾರಿಗಾದರೂ ಮಾಡಿಕೊಳ್ಳಿ, ಅದಕ್ಕೆ ನಮ್ಮ ಅಭ್ಯಂತರವೇನೂ ಇಲ್ಲ, ಒತ್ತಾಯವೂ ಇಲ್ಲ, ಏಕೆಂದರೆ ನಾವು ಅವರಿಗೆ ಯಾವ ಕಾಲದಲ್ಲೂ ಬಡ್ಡಿ ಮನ್ನಾ ಮಾಡಿಲ್ಲ, ನನ್ನ ಕಾಲದಲ್ಲೂ ಮಾಡಿಲ್ಲ, ಮಾಡುವುದಾದರೆ ನಮ್ಮ ಅಭ್ಯಂತರ ಏನೂ ಇಲ್ಲ. ಆದರೆ ಈಗ ತತ್‌ಕ್ಷಣಕ್ಕೆ ಮಾನ್ಯ ಸಿಂಧ್ಯರವರು ಹೇಳಿದರು, ಗೂಡನ್ನು ಕೊಂಡು ಕೊಂಡು ಸ್ವಫ್ ಮಾಡಿ ಅಥವಾ ಗೂಡನ್ನೂ ಕುಸಿದು ಸ್ಟಾಕ್ ಮಾಡಿಕೊಳ್ಳುವಂತಹ ಸಾಧ್ಯತೆಗಳಿವೆ, ಪ್ರಯತ್ನ ಮಾಡಿದರೆ

ಇವತ್ತು ಸಹಿತ ಸಿಲ್ಕ್ ಫಿಲೇಚರ್ ಮಾಡಿಸಿ ಸ್ಟಾಕ್ ಮಾಡುವುದಕ್ಕೆ ಅವಕಾಶವಿದೆ, ಅಥವಾ ಹಬೆ ಕೊಟ್ಟು ಪ್ರಿಸರ್ವ ಮಾಡಿಕೊಳ್ಳುವುದಕ್ಕೆ ಎಷ್ಟೆ ಹಣ ಖರ್ಚಾಗಲಿ, ಮಾಡಬೇಕು, ಇಲ್ಲದಿದ್ದರೆ ಇಡೀ ಕರ್ನಾಟಕ ರಾಜ್ಯದ ದಕ್ಷಿಣ ಭಾಗದ ರೈತರು ಹೊಟ್ಟೆಪಾಡಿಗೆ ಮಾಡುವವರು ಶಾಪ ಹಾಕುತ್ತಾರೆ, ಅಷ್ಟೇ ಅಲ್ಲದೇ ನಮಗೆಲ್ಲರಿಗೂ ಊರಿಗೆ ಹೋಗುವುದಕ್ಕೆ ಕಷ್ಟವಾಗುತ್ತದೆ. ಆದುದರಿಂದ ನಾನು ಸರ್ಕಾರದವಲ್ಲಿ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ, ಸದನದಲ್ಲಿ ಕ್ಯಾಬಿನೆಟ್ ಮಂತ್ರಿಗಳು ಇಲ್ಲಿ ಇರುವುದರಿಂದ ಮತ್ತು ಮಾನ್ಯ ಮುಖ್ಯಮಂತ್ರಿಯವರು ಹಾಗೂ ಸಂಬಂಧಪಟ್ಟಂತಹ ಮಂತ್ರಿಗಳು ಇಬ್ಬರೂ ಇಲ್ಲಿ ಇದ್ದಾರೆ, ನಾನು ನನ್ನ ಸ್ನೇಹಿತರ ಜೊತೆಗೆ ಸೇರಿಕೊಂಡು ಸರ್ಕಾರವನ್ನು ಒತ್ತಾಯ ಮಾಡುವುದೇನೆಂದರೆ ಈ ರೈತರ ಗಂಭೀರವಾದಂತಹ ಪರಿಸ್ಥಿತಿಯನ್ನು ಎದುರಿಸಬೇಕಾದರೆ ಸರ್ಕಾರಕ್ಕೆ ಬೇರೆ ಮಾರ್ಗವಿಲ್ಲ. There is not other alternative except to intervene for purchasing the cocoons. ಆದುದರಿಂದ ದಯಮಾಡಿ ಸರ್ಕಾರ ರೈತರಿಗೆ ಸಹಾಯ ಮಾಡಬೇಕೆಂದು ನಾನು ಸಹಿತ ಒತ್ತಾಯ ಮಾಡುತ್ತೇನೆ.

ಶ್ರೀ ಎಸ್.ಎಸ್. ಪಾಟೀಲ್ (ಮುಂಡರಗಿ): ಮಾನ್ಯ ಉಪಾಧ್ಯಕ್ಷರೇ, ಇದು ಕೇವಲ ದಕ್ಷಿಣ ಕರ್ನಾಟಕದಲ್ಲಿ ಮಾತ್ರವಲ್ಲ, ನಾನು ಕೂಡ ಒಬ್ಬ ರೇಷ್ಮೆ ಬೆಳೆಯ ಬೆಳೆಗಾರನಾಗಿದ್ದೇನೆ, ನಮ್ಮಲ್ಲೂ ಅಲ್ಲಲ್ಲಿ ಸ್ವಲ್ಪ, ಸ್ವಲ್ಪ ರೇಷ್ಮೆ ಬೆಳೆಯನ್ನು ಬೆಳೆಯುತ್ತಿದ್ದೇವೆ. ಇದರಿಂದಲೇ ಮನೆಗಳಲ್ಲಿ ಜೀವನ ನಡೆಯುತ್ತಿದೆ, ನಮ್ಮ ರೈತರುಗಳು ಅರ್ಧ ಎಕರೆ, ಒಂದು ಎಕರೆಯಲ್ಲಿ ಈ ರೇಷ್ಮೆ ಬೆಳೆಯನ್ನು ಬೆಳೆಸಿಕೊಂಡು ಬದುಕುತ್ತಿದ್ದಾರೆ, ಇಂತಹ ಪರಿಸ್ಥಿತಿಯಲ್ಲಿ ಈ ಗೂಡನ್ನು ಖರೀದಿ ಮಾಡದೇ ಬಂದ್ ಆಗಿಬಿಟ್ಟರೆ ಇವರ ಪರಿಸ್ಥಿತಿ ಎಷ್ಟು ಘೋರವಾಗುತ್ತದೆ, ಇದನ್ನು ತಾವು ಗಮನಿಸಬೇಕಾಗುತ್ತದೆ. ಈ ವಿಚಾರವಾಗಿ ನಾನು ಹೆಚ್ಚು ಮಾತನಾಡುವುದಕ್ಕೆ ಹೋಗುವುದಿಲ್ಲ, ಈಗಾಗಲೇ ಈ ವಿಷಯವಾಗಿ ನಮ್ಮ ನಾಯಕರು ಮತ್ತು ಎಲ್ಲರೂ ಮಾತನಾಡಿದ್ದಾರೆ. ಇವತ್ತು ಉತ್ತರ ಕರ್ನಾಟಕದಲ್ಲೂ ಬಹಳಷ್ಟು ಜನರು ಈ ರೇಷ್ಮೆ ಬೆಳೆಯ ಮೇಲೆ ಅವಲಂಬಿತರಾಗಿದ್ದೇವೆ, ನಾನು ಕೂಡ ಒಬ್ಬ ರೇಷ್ಮೆ ಬೆಳೆಗಾರನಾಗಿದ್ದೇನೆ, ಆದುದರಿಂದ ಮಾನ್ಯ ಮುಖ್ಯಮಂತ್ರಿಯವರು ಕೂಡಲೇ ಕ್ರಮ ಕೈಗೊಂಡು ಆ ಎಲ್ಲಾ ರೇಷ್ಮೆಯನ್ನು ಖರೀದಿ ಮಾಡುವುದಕ್ಕೆ ವ್ಯವಸ್ಥೆ ಮಾಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಒತ್ತಾಯಮಾಡುತ್ತಿದ್ದೇನೆ.

ಶ್ರೀ ಸಿ. ಚೆನ್ನಿಗಪ್ಪ (ಕೊರಟಗೆರೆ): ಮಾನ್ಯ ಉಪಾಧ್ಯಕ್ಷರೇ, ಈಗ ಎಲ್ಲಾ ಹಿರಿಯ ಮಾನ್ಯ ಸದಸ್ಯರುಗಳು ರೈತರ ಬಗ್ಗೆ ಮತ್ತು ರೇಷ್ಮೆ ಬೆಳೆಗಾರರ ಬಗ್ಗೆ ಸರ್ಕಾರದ ಗಮನಕ್ಕೆ ಹಾಗೂ ಮಾನ್ಯ ಮುಖ್ಯಮಂತ್ರಿಯವರ ಗಮನಕ್ಕೆ ತಂದಿದ್ದಾರೆ, ಮತ್ತೆ ವಿನಂತಿ ಮಾಡಿಕೊಂಡಿದ್ದಾರೆ, ಇವತ್ತು ಫಿಲೇಚರ್ಸ್ ಏನು ತೆಗೆದುಕೊಳ್ಳುವುದಿಲ್ಲವೆಂದು ಮುಷ್ಕರ ಮಾಡಿದ್ದಾರೆ, ಅದನ್ನು ಕೂಡಲೇ ಸಾಲ್ವ್ ಮಾಡುವಂತಹ ವಿಚಾರದಲ್ಲಿ ಸರ್ಕಾರ ಇಂಟರ್‌ಫೀಯರ್ ಆಗಬೇಕು, ಮತ್ತೆ ರೈತರು ಏನು ಬೆಳೆದಿದ್ದಾರೆ, ಅದನ್ನು ಇಪ್ಪತ್ತನಾಲ್ಕು ಗಂಟೆಗಳು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಇಂತಹ ಸಂದರ್ಭದಲ್ಲಿ ರೈತರಿಗೆ ಲಾಸ್ ಆದರೆ, ಇಂತಹ ಪರಿಸ್ಥಿತಿಯಲ್ಲಿ ಇವರ ಆತ್ಮಹತ್ಯೆ ಪ್ರಕರಣಗಳು ಹೆಚ್ಚಾಗಿವೆ, ಇಂತಹ ಪರಿಸ್ಥಿತಿಗೆ ಅವಕಾಶವಾಗಬಾರದು, ಮಾನ್ಯ ಮುಖ್ಯ ಮಂತ್ರಿಯವರಿಗೂ ರೈತರ ಕಷ್ಟ ಏನೆಂಬುದು ಗೊತ್ತಿದೆ, ಮತ್ತೆ ಇವರ ಭಾಗದಲ್ಲೂ ರೇಷ್ಮೆ ಬೆಳೆಯನ್ನು ಹೆಚ್ಚಿಗೆ ಬೆಳೆಯುತ್ತಾರೆ, ಮತ್ತೆ ಈ ರೇಷ್ಮೆ ಬೆಳೆಯನ್ನು ಏನು ಬೆಳೆಯುತ್ತಾರೆ, ಫಿಲೇಚರ್‌ಗಳನ್ನು ಏನು ನಡೆಸುತ್ತಾರೆ, ಅವರಿಗೂ ಅನುಕೂಲವಾಗುವ ರೀತಿಯಲ್ಲಿ ಕೂಡಲೇ ಹಣವನ್ನು ಬಿಡುಗಡೆ

ಮಾಡಿ, ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಮಂತ್ರಿಯವರು ಅವರ ಸಂಕಷ್ಟದಲ್ಲಿ ಭಾಗಿಯಾಗಿ, ಅವರಿಗೆ ಅನುಕೂಲ ಮಾಡಿಕೊಡಬೇಕೆಂದು ಹೇಳಿ ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಯವರನ್ನು ಒತ್ತಾಯಿಸುತ್ತೇನೆ.

ಶ್ರೀ ಎ. ನಾಗರಾಜ್ (ಮಾಲೂರು): ಮಾನ್ಯ ಉಪಾಧ್ಯಕ್ಷರೆ, ಇದು ರೈತರ ಮೇಲೆ ಕೆಟ್ಟ ಪರಿಣಾಮ ಉಂಟಾಗಿದೆ, ನಿನ್ನೆ ಸರ್ಕಾರವೂ ಕೂಡ ಇವರಿಗೆ ಒಡ್ಡಿ ಮನ್ನಾ ಮಾಡುತ್ತೇವೆಂದು ಮತ್ತು ಒಟಿಎಸ್‌ಗೆ ಅವಕಾಶ ಮಾಡಿಕೊಡುತ್ತೇವೆಂದು ಅನೌನ್ಸ್ ಮಾಡಿದೆ, ಆದರೂ ಸಹಿತ ಇವರು ಮುಷ್ಕರವನ್ನು ಮುಂದುವರೆಸಿದ್ದಾರೆ, ಆದುದರಿಂದ ಕೂಡಲೇ ಸರ್ಕಾರ ಈ ರೀಲರ್ಸ್‌ಗಳನ್ನು ಕರೆಸಿ, ಇದನ್ನು ಪರಿಹರಿಸಬೇಕೆಂದು ನಾನು ಒತ್ತಾಯ ಮಾಡುತ್ತೇನೆ.

+ಶ್ರೀ ಹೆಚ್.ಎಂ. ರೇವಣ್ಣ (ಜವಳಿ ಮತ್ತು ರೇಷ್ಮೆ ಸಚಿವರು): ಮಾನ್ಯ ಉಪಾಧ್ಯಕ್ಷರೇ, ಈ ಸದನದಲ್ಲಿ ಎಲ್ಲಾ ಪಕ್ಷದ ಹಿರಿಯ ಮುಖಂಡರು ರೈತರು ಬೆಳೆಯುವಂತಹ ರೇಷ್ಮೆಯ ಬಗ್ಗೆ ಉತ್ತಮವಾಗಿ ಮಾತುಗಳನ್ನಾಡಿದ್ದಾರೆ, ಆದರೆ ಈ ಪರಿಸ್ಥಿತಿ ನಿನ್ನೆಯ ದಿವಸ ಉದ್ಭವವಾಗಿದ್ದು ರೀಲರ್ಸ್‌ನಿಂದ ಮುಷ್ಕರ ಪ್ರಾರಂಭವಾಗಿ ಇವತ್ತು ರೇಷ್ಮೆ ಬೆಳೆಗಾರರಿಗೂ ಹೋಗುವಂತಹ ಪರಿಸ್ಥಿತಿ ನಿರ್ಮಾಣವಾಗಿದೆ. ಇಲ್ಲಿ ನಾನು ಒಂದು ಮಾತನ್ನು ಹೇಳುವುದಕ್ಕೆ ಇಷ್ಟ ಪಡುವುದೆನೆಂದರೆ ಹಿಂದೆ ಕೂಡ ರೀಲರ್ಸ್ ಈ ರೀತಿ ಮಾಡಿದ್ದರು. ಈ ಒಂದು ವರ್ಗ ಮಾಡುವಂತಹ ಈ ಕಸುಬು, ಸಮಯ ನೋಡಿ ಕಷ್ಟ ಕೊಡುವಂತಹ ಕೆಲಸವನ್ನು ಮಾಡಿಕೊಂಡು ಬರುತ್ತಿದ್ದಾರೆ. ಇದನ್ನು ನಾನು ಹೇಳದೆ ಹೋದರೆ ತಪ್ಪಾಗುತ್ತದೆ, ಇವರು ನನ್ನ ಸಚಿವಾಲಯಕ್ಕೆ ನೇರವಾಗಿ ಬಂದು ಚರ್ಚೆಯನ್ನು ಮಾಡದೇ ಬರೀ ಒಂದು ಕರಪತ್ರವನ್ನು ಮಾಡಿ ಬಿಟ್ಟಿದ್ದರು, ಅದನ್ನು ನೋಡಿ ನಾವು ಅದಕ್ಕೆ ಸ್ಪಂದಿಸುವಂತಹ ಕೆಲಸವನ್ನು ಮಾಡಿದರೂ ಕೂಡ ಇವರು 18ನೇ ತಾರೀಖು ಯಾವುದೇ ಮುಷ್ಕರವನ್ನು ಮಾಡುವಂತಹದಕ್ಕೆ ದೊಡ್ಡ ಪ್ರಮಾಣದಲ್ಲಿ ಭಾಗಿಯಾಗುವಂತಹ ಈ ವಹಿವಾಟಿನಲ್ಲಿ ಬರೀ ಒಂದು ಕರಪತ್ರದಿಂದ, ಪತ್ರಿಕಾ ಹೇಳಿಕೆಯನ್ನು ಕೊಟ್ಟು, ಅದನ್ನೇ ಮುಷ್ಕರಕ್ಕೆ ಪರಿವರ್ತಿಸಿದ್ದಾರೆ. ಇವರು ಕೊಟ್ಟಿದ್ದಂತಹ ಗಡುವು 5ನೇ ತಾರೀಖು ಸರ್ಕಾರ ಸ್ಪಂದಿಸದೇ ಇದ್ದರೆ, 6ನೇ ತಾರೀಖು ನಾವು ಮುಷ್ಕರ ಮಾಡುತ್ತೇವೆಂದು ಹೇಳಿದ್ದಾರೆ. ನಿನ್ನೆ ನೀವು ಕೊಟ್ಟಿರುವಂತಹ ಸಲಹೆಗಳಿಗೆ ಮತ್ತೆ ಅವರು ಕೊಟ್ಟಿರುವಂತಹ ಐದು ಬೇಡಿಕೆಗಳಲ್ಲಿ ಪ್ರಮುಖವಾದಂತಹ ಹಣದ ಬಿಡುಗಡೆ ಏನು ಇತ್ತು, ಅದನ್ನು ಒಂದು ವಾರದಲ್ಲಿ ಬಿಡುಗಡೆ ಮಾಡುತ್ತೇವೆಂದು, ನಮ್ಮ ನಾಯಕರಾದ ಮಾನ್ಯ ಮುಖ್ಯಮಂತ್ರಿಯವರ ಒಪ್ಪಿಗೆಯ ಮೇರೆಗೆ ನಾವು ಒಪ್ಪಿಗೆಯನ್ನು ಕೊಟ್ಟರೂ ಕೂಡ ಈ ರೀತಿಯಾಗಿ ಮುಷ್ಕರವನ್ನು ಹೂಡಿರುವಂಥಾದ್ದು ಮತ್ತು ಅವರ ಜೊತೆಗೆ ಮಾತನಾಡಲು ನಮ್ಮ ಅಧಿಕಾರಿಗಳು ಸ್ಥಳಕ್ಕೆ ಹೋದರೆ ಅಲ್ಲಿ ಒಬ್ಬ ರೀಲರ್ಸ್ ಕೂಡ ಇಲ್ಲ. ನಿನ್ನೆಯ ದಿವಸ ಮಾನ್ಯ ಬೈರೇಗೌಡರು ರೀಲರ್ಸ್‌ಗಳ ಪರ ಮಾತನಾಡಿದರು, ಇವತ್ತು ಒಂದೇ ದಿವಸಕ್ಕೆ ರೈತರ ಪರವಾಗಿ ಬಿಟ್ಟರು. ನೀವು ಮಾತನಾಡಿದ್ದು ಆ ಅರ್ಥದಲ್ಲೆ, ನಾನು ಹೇಳುವುದನ್ನು ಕೇಳಿ, ನಾವು ಅವರ ಬೇಡಿಕೆಗೆ ಒಪ್ಪಿಲ್ಲವೇ?

ಶ್ರೀ ಸಿ.ಬೈರೇಗೌಡ: ಇವತ್ತು ರೈತರು ಏಕೆ ಬೀದಿಗೆ ಇಳಿದಿದ್ದಾರೆ, ನೀವು ಅವರ ಸಮಸ್ಯೆಗಳನ್ನು ಬಗೆಹರಿಸಿ, ನೀವು ಆ ರೀತಿ ಮಾಡಿದಿದ್ದರೆ ಅವರು ಬೀದಿಗೆ ಇಳಿಯುತ್ತಿರಲಿಲ್ಲ, ಯಾರು ಕಷ್ಟದಲ್ಲಿರುತ್ತಾರೋ, ಅವರೆಲ್ಲರ ಪರವಾಗಿರುವುದು, ಅದು ನಮ್ಮ ಕರ್ತವ್ಯ, ಅದಕ್ಕೋಸ್ಕರ ನಾವಿಲ್ಲಿಗೆ ಬಂದಿರುವುದು.

ಶ್ರೀ ಹೆಚ್.ಎಂ. ರೇವಣ್ಣ : ನಾನು ಈಲ್ಡ್ ಆಗಿಲ್ಲ, ನೀವು ಹೇಳಿರುವುದೆಲ್ಲವನ್ನು ಕೇಳಿದ್ದೇವೆ, ನಾವು ಅದಕ್ಕೆ ಸ್ಪಂದಿಸಿದ್ದೇವೆ, ಹೌದು ನಿನ್ನೆಯ ದಿವಸ ರೀಲರ್ಸ್ ಕಷ್ಟದಲ್ಲಿದ್ದರು, ನಮಗೆ ಮಾತನಾಡುವುದಕ್ಕೆ ಅವಕಾಶ ಕೊಡಿ, ತಾವು ಕುಳಿತುಕೊಳ್ಳಿ, ಸರ್ಕಾರ ರೀಲರ್ಸ್‌ಗಳ ಬೇಡಿಕೆಗಳನ್ನು ಒಪ್ಪಿರುವಾಗ, ಇವರು ಮುಷ್ಕರವನ್ನು ಮುಂದುವರೆಸುವುದಕ್ಕೆ ಕಾರಣ ಏನು ಎಂಬುದು ನಮಗೆ ಬೇಕು, ಇಲ್ಲಿ ನಾವು ರೈತರಿಗೆ ತೊಂದರೆಯಾಗಿರುವುದನ್ನು ನೋಡುತ್ತಿದ್ದೇವೆ, ಇವರಿಗೆ ತೊಂದರೆ ಇಲ್ಲವೆಂದು ಹೇಳುತ್ತಾ ಇಲ್ಲ. ಅವರು ಕೊಟ್ಟಿರುವಂತಹ ಗಡುವು 5ನೇ ತಾರೀಖಿಗೆ ನಮ್ಮ ಬೇಡಿಕೆಗಳನ್ನು ಈ ಡೇರದಿದ್ದರೆ...

ಶ್ರೀ ಪಿ.ಜಿ.ಆರ್. ಸಿಂಧ್ಯ: ಮಾನ್ಯ ಉಪಾಧ್ಯಕ್ಷರೆ, ನಾನು ಮಾನ್ಯ ರೇಷ್ಮೆ ಸಚಿವರಲ್ಲಿ ಹಾಗೂ ಸರ್ಕಾರದವರಲ್ಲಿ ವಿನಂತಿ ಮಾಡಿಕೊಳ್ಳುವುದೆಂದರೆ ಈ ಫಳಿಗೆಯಲ್ಲಿ ರೀಲರ್ಸ್ ಜೊತೆಯಲ್ಲಿ, ಮತ್ತೊಬ್ಬರ ಜೊತೆಯಲ್ಲಿ ಸಂಘರ್ಷಕ್ಕೆ ಹೋಗುವುದರಲ್ಲಿ ಅರ್ಥವಿಲ್ಲ. ಈಗ ಪರಿಸ್ಥಿತಿ ಏನೆಂಬುದು ತಮಗೆ ಗೊತ್ತಿದೆ, ಅವರು ಬಂದು ಗೂಡಿನ ಮಾಲು ಮಾರುಕಟ್ಟೆಯಲ್ಲಿ ಸುಮಾರು 70ಲಕ್ಷ ರೂಪಾಯಿಗಳಿಂದ ಒಂದು ಕೋಟಿ ರೂಪಾಯಿಗಳಷ್ಟು ರೇಷ್ಮೆ ಗೂಡನ್ನು 12 ರೇಷ್ಮೆ ಮಾರುಕಟ್ಟೆಯಲ್ಲಿ ಬೆಳಿಗ್ಗೆ 4 ಗಂಟೆಯಿಂದ ಇಟ್ಟುಕೊಂಡಿದ್ದಾರೆ, ಇದನ್ನು ನೀವು 5-6ಗಂಟೆಗಳಲ್ಲಿ ಪರ್ಚೀಸ್ ಮಾಡದೇ ಹೋದರೆ ಚಿಟ್ಟೆ ಹೊರಗಡೆ ಬಂದರೆ ಸುಮಾರು 70ಲಕ್ಷ ರೂಪಾಯಿಗಳು ಒಂದು ದಿವಸದಲ್ಲೇ ಹೋಗುತ್ತದೆ. ಅದು ಎಲ್ಲಾ ಬರಗಾಲದ ಪ್ರದೇಶಗಳಿಂದ ಮುಂಡರಗಿ ಇರಲಿ, ಚಾಮರಾಜ ನಗರವಿರಲಿ, ಕೋಲಾರವಾಗಿರಲಿ ಈ ಸನ್ನಿವೇಶವಿದೆ. ಆದುದರಿಂದ ಅವರು ಏನು ಬೇಡಿಕೆಗಳನ್ನು ಕೊಟ್ಟಿದ್ದರು, ಯಾವತ್ತು ಕೊಟ್ಟಿದ್ದರು, ಏನು ಕೊಟ್ಟಿದ್ದರು ಇದನ್ನೆಲ್ಲಾ ಒಪ್ಪತಕ್ಕಂಥ ವಿಚಾರ, ನಾವು ಸಹಿತ ಆಡಳಿತವನ್ನು ನಡೆಸಿ ಅನುಭವಿಸಿರುವಂಥಾದ್ದು. ಆದುದರಿಂದ ಈಗ ಸಂಘರ್ಷಕ್ಕೆ ಹೋಗುವಂಥಾದ್ದರಲ್ಲಿ ಏನೂ ಉಪಯೋಗವಿಲ್ಲ, ಆದುದರಿಂದ ಅವರನ್ನು ಪೊಲೀಸರ ಮೂಲಕವೊ, ರೇಷ್ಮೆ ಇಲಾಖೆಯ ಮೂಲಕವೋ, ಮತ್ತೊಬ್ಬರ ಮೂಲಕವೊ, ಅಥವಾ ತಾವೇ ಅವರನ್ನು ಕರೆಸಿ, ಅವರಲ್ಲೆ ಏನೇನು ವ್ಯತ್ಯಾಸಗಳು ಇವೆಯೋ, ಅದು ನನಗೆ ಗೊತ್ತಿಲ್ಲ. ಆದುದರಿಂದ ದಯವಿಟ್ಟು ಇವತ್ತು ಸಾಯಂಕಾಲವೇ ಅವರನ್ನು ಕರೆಸಿ, ಅವರಿಗೆ ಹಣವನ್ನು ಬಿಡುಗಡೆ ಮಾಡುವುದನ್ನು ಮಾಡದಿದ್ದರೆ ರೈತರಿಗೆ ತೊಂದರೆಯಾಗುತ್ತದೆಂಬುದನ್ನು ತಮ್ಮ ಮುಖಾಂತರ ಮಾನ್ಯ ಮುಖ್ಯಮಂತ್ರಿಯವರಲ್ಲಿ ವಿನಂತಿ ಮಾಡಿಕೊಳ್ಳುತ್ತೇನೆ.

ಶ್ರೀ ಹೆಚ್.ಎಂ.ರೇವಣ್ಣ: ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಸಿಂಧ್ಯರವರು ಏನು ಹೇಳಿದ್ದಾರೆ, ಆ ಮಾತನ್ನು ಒಪ್ಪುತ್ತೇವೆ, ಆದರೆ ಇಲ್ಲಿ ಎರಡು ಅಸೋಸಿಯೇಷನ್‌ಗಳಾಗಿವೆ, ನಮ್ಮಲ್ಲಿಗೆ ಬಂದಿದ್ದವರು ಮುಷ್ಕರವನ್ನು ನಿಲ್ಲಿಸುತ್ತೇವೆಂದು ಹೇಳಿದರು. ಶಿಡ್ಲಘಟ್ಟದಲ್ಲಿ, ಚಾಮರಾಜನಗರದಲ್ಲಿ ಮುಷ್ಕರವನ್ನು ನಿಲ್ಲಿಸಿದರು, ಇಲ್ಲಿ ವ್ಯಾಪಾರವೂ ಆಯಿತು, ಮಧ್ಯಾಹ್ನದಲ್ಲಿ ಚಾಮರಾಜನಗರದಲ್ಲಿ ಇಲ್ಲಿಂದ ಮಾಹಿತಿ ಅವರಿಗೆ ನೀವು ಮುಷ್ಕರವನ್ನು ನಿಲ್ಲಿಸಿ, ನಾವು ನಿಲ್ಲಿಸಿದ್ದೇವೆಂದು ಜನರ ಕೈಗೂ ಸಿಗದ ಹಾಗೆ ಪ್ರಕರಣ ನಡೆದಿದ್ದರಿಂದ ಈ ಪರಿಸ್ಥಿತಿ ನಿರ್ಮಾಣವಾಗಿದೆ. ನಮ್ಮ ರಾಮನಗರ ಮಾರುಕಟ್ಟೆ ಇಡೀ ಏಷ್ಯಾ ಖಂಡದಲ್ಲೇ ದೊಡ್ಡ ಮಾರುಕಟ್ಟೆಯಾಗಿದೆ, ಇಲ್ಲಿಗೆ ಬೀದರ್, ಬೆಳಗಾಂ ಜಿಲ್ಲೆಗಳಿಂದರೂ ಬರುತ್ತಿದ್ದಾರೆ. ಇಲ್ಲಿ ಶಿಡ್ಲಘಟ್ಟವೇ ಬೇರೆ, ರಾಮನಗರವೇ ಬೇರೆ ಬೇರೆಯಾಗಿ ಮುಷ್ಕರ ಮಾಡಿದ್ದಾರೆ. ಸರ್ಕಾರವೂ ಈಗಲೂ

ಕೂಡ ನಾವು ಮೆಸೆಂಜರ್ ಕಳುಹಿಸಿದ್ದೇವೆ, ಅವರ ಪ್ರತಿನಿಧಿಗಳನ್ನು ಕರೆಸುತ್ತಿದ್ದೇವೆ, ಸರ್ಕಾರವೂ ಕೂಡ ಕಾಳಜಿಯನ್ನು ವಹಿಸುತ್ತಿದೆ, ನಾವು ಕೂಡ ಪ್ರಯತ್ನವನ್ನು ಮಾಡುತ್ತಿದ್ದೇವೆ.

ಶ್ರೀ ಪಿ.ಜಿ.ಆರ್. ಸಿಂಧ್ಯ: ಅವರ ಬೇಡಿಕೆಯ ಬಗ್ಗೆ ಕೇಳಿ.

ಶ್ರೀ ಹೆಚ್.ಎಂ. ರೇವಣ್ಣ: ಮಾನ್ಯ ಸಿಂಧ್ಯರವರೇ, ಅವರ ಬೇಡಿಕೆಗಳನ್ನು ನಿನ್ನೆಯೇ ಒಪ್ಪಿದ್ದೇವೆ.

ಶ್ರೀ ಸಿ. ಬೈರೇಗೌಡ: ಮಾನ್ಯ ಉಪಾಧ್ಯಕ್ಷರೆ, ಅವರ ಮುಖ್ಯವಾದಂತಹ ಬೇಡಿಕೆಗಳು ಅವರು ವಾಪಸ್ಸು ಕೊಡಬೇಕಾದಂತಹ ಸಾಲವನ್ನು 2004ರವರೆಗೆ ವಿಸ್ತಾರ ಮಾಡುವಂಥಾದ್ದು, ಮತ್ತೆ ಎಲ್ಲಾ ಮೂಲಗಳ ಮೇಲೆ ಮಾಡಿರುವಂತಹ ಸಾಲದ ಮೇಲಿನ ಬಡ್ಡಿಯನ್ನು ಮನ್ನಾ ಮಾಡಬೇಕಾದದ್ದು, ಇಷ್ಟನ್ನು ನೀವು ಒಪ್ಪಿದರೆ, ಈ ಸದನದ ಮೂಲಕ ಎಲ್ಲಾ ಸುದ್ದಿ ಮಾಧ್ಯಮಗಳ ಮೂಲಕ ಸುದ್ದಿ ತಲುಪುತ್ತದೆ. ನೀವು ಇದಕ್ಕೆ ಒಪ್ಪುವುದಾದರೆ ನಾವು ನಮ್ಮ ಪ್ರಯತ್ನವನ್ನೂ ಕೂಡ ಮಾಡುತ್ತೇವೆ.

6.10 ಪಿ.ಎಂ

ಅವರ ಮನಸ್ಸನ್ನು ಒಲಿಸತಕ್ಕಂಥ ಪ್ರಯತ್ನವನ್ನೂ ಕೂಡ ಮಾಡುತ್ತೇವೆ, ಇದರಲ್ಲಿ ಕೇವಲ ನಿಮ್ಮ ಜವಾಬ್ದಾರಿ ಇದೆ ಎಂದು ಭಾವಿಸಬೇಡಿ ನಮ್ಮ ಜವಾಬ್ದಾರಿಯೂ ಕೂಡ ಇದೆ, ನಾನು ಒಬ್ಬ ಬೆಳಗಾರನಾಗಿದ್ದು, ನನ್ನ ಸ್ವಂತ ಅವಶ್ಯಕತೆಯನ್ನು ನೋಡಿಕೊಳ್ಳುವುದೂ ಕೂಡ ಅವಶ್ಯಕವಿದೆ. ಆದುದರಿಂದ ಈ ಮುಖ್ಯವಾದ ಬೇಡಿಕೆಗಳನ್ನು ನಾವು ಒಪ್ಪಿದ್ದೇವೆ ಎನ್ನುವ ಒಂದು ಹೇಳಿಕೆ ತಮ್ಮಿಂದ ಬರಲಿ, ಇದನ್ನು ಮಾಡಲೇ ಬೇಕು ಎನ್ನುವುದನ್ನು ನಮಗೆ ಗೊತ್ತಿರುವ ಆತ್ಮೀಯರು ಯಾರಿದ್ದಾರೆ ಅವರಿಗೂ ಕೂಡ ಹೇಳುತ್ತೇವೆ. ಇಲ್ಲ ನೀವು ಮಾಡಲೇ ಬೇಕು, ಸರ್ಕಾರ ಒಪ್ಪಿರತಕ್ಕಂಥ ಸಂದರ್ಭದಲ್ಲಿ ನೀವು ಹರಾಜಿನಲ್ಲಿ ಭಾಗವಹಿಸಲೇ ಬೇಕು ಎಂದು ನಾವೂ ಕೂಡ ಒತ್ತಾಯಪೂರ್ವಕವಾಗಿ ಹೇಳುತ್ತೇವೆ, ಏನೂ ಇಲ್ಲದೆ ತಾವು ಅವರನ್ನು ಕರೆಯಿಸುತ್ತೇವೆ ಮಾಡುತ್ತೇವೆಂದರೆ, ನಿನ್ನೆಯೂ ಇದೇ ಮಾತನ್ನು ಕರೆಯಿಸುತ್ತೇವೆಂದು ಹೇಳಿದ್ದಿರಿ, ಬರಲೇ ಇಲ್ಲ ಎನ್ನುವ ಮಾತನ್ನು ಈಗ ಹೇಳುತ್ತಿದ್ದೀರಿ. ಈಗ ಬರಿಗೈನಲ್ಲಿ ಏನೂ ಇಲ್ಲದೆ ಪುನಃ ಪುನಃ ಮೆಸೆಂಜರ್ ಕಳುಹಿಸಿದ್ದೇವೆ ಎಂದು ತಾವು ಹೇಳುತ್ತಿದ್ದೀರಿ, ನಿಮ್ಮ ಮೆಸೆಂಜರ್‌ಗೆ ಅವರು ಬರದಿದ್ದರೆ ಏನಾಗುತ್ತದೆ? ಇವತ್ತಿನ ಪರಿಸ್ಥಿತಿ ಏನಾಗಿದೆಯೋ ಅದಕ್ಕಿಂತ ನಾಳೆಯ ಪರಿಸ್ಥಿತಿ ಭೀಕರವಾಗುತ್ತದೆ ನಾವು ಕೂಡ ಬೀದಿಗಿಳಿಯಬೇಕಾಗುತ್ತದೆ, ಇದನ್ನು ದಯವಿಟ್ಟು ಗಮನಿಸಿ.

ಶ್ರೀ ಬಿ.ಎನ್. ಬಚ್ಚೇಗೌಡ: ಮಾನ್ಯ ಮಂತ್ರಿಗಳು ಭರವಸೆಯನ್ನು ಕೊಟ್ಟರೆ ಅವರು ಮುಷ್ಕರವನ್ನು ವಾಪಸ್ ಪಡೆಯುತ್ತಾರೆ, ಪಾಸಿಟಿವ್ ಆಗಿ ಸರ್ಕಾರದ ವತಿಯಿಂದ ಒಂದು ಭರವಸೆಯನ್ನು ಕೊಡಬೇಕು, ಪಾಸಿಟಿವ್ ಆಗಿ ತಾವು ಭರವಸೆಯನ್ನು ಕೊಡದಿದ್ದರೆ, ರೈತನಿಗೆ ತುಂಬಾ ಕಷ್ಟವಾಗುತ್ತದೆ. ತಾವು ಅದೇ ಕ್ಷೇತ್ರದಿಂದ ಬಂದಿರುವವರು, ತಮಗೆ ಅದೆಲ್ಲಾ ಗೊತ್ತಿದೆ, ತಾವು ರೇಷ್ಮೆಯವರು, ನಾವು ರೇಷ್ಮೆಯವರೆ.

ಶ್ರೀ ಹೆಚ್.ಎಂ. ರೇವಣ್ಣ: ಮಾನ್ಯ ಬಚ್ಚೇಗೌಡರೆ, ಎರಡು ಸಾರಿ ಮಾತನಾಡಿದ್ದೆ ಅವರು ಒಪ್ಪಿದ್ದರು, ಈ ವಿಷಯದ ಬಗ್ಗೆ ನಿನ್ನೆಯಿಂದ ಬದಲಾವಣೆಯಾದ ಪರಿಸ್ಥಿತಿ ನಿರ್ಮಾಣವಾಗಿದೆ.

ಶ್ರೀ ಎಸ್.ಎಂ.ಕೃಷ್ಣ (ಮುಖ್ಯಮಂತ್ರಿಗಳು): ರೈತರಿಗೆ ತೊಂದರೆಯಾಗಿದೆ ಎಂದ ಮಾತ್ರಕ್ಕೆ ರೀಲರ್ಸ್ ಸರ್ಕಾರವನ್ನು ಮತ್ತು ರೈತರನ್ನು ತಮ್ಮ ಕಪಿಮುಷ್ಠಿಯಲ್ಲಿಟ್ಟುಕೊಳ್ಳುವುದಕ್ಕೆ

ನಾವು ನೀವು ಭಾಗಿದಾರರಾಗಬೇಕಾಗಿಲ್ಲ. ಮಂತ್ರಿಗಳಿಗೆ ಮುಕ್ತವಾದ ಮನಸ್ಸಿದೆ, ದುರಾದೃಷ್ಟ ರೀಲರ್ಸ್ ಪೈಕಿ ಎರಡು ಅಸೋಷಿಯೇಷನ್ ಆಗಿರಬಹುದು ನನಗೆ ಹೆಚ್ಚಿನ ಮಾಹಿತಿ ಇಲ್ಲ, ಮಾನ್ಯ ಸಚಿವರು ಏನು ಹೇಳಿದ್ದಾರೆ ಅದನ್ನು ಕೇಳಿದ್ದೇನೆ. ಮಾನ್ಯ ಬೈರೇಗೌಡರ ಆಕ್ರೋಶವನ್ನೂ ಕೂಡ ನಾನು ಅರ್ಥಮಾಡಿಕೊಳ್ಳಬಲ್ಲೆ, ಅದೇ ಆಕ್ರೋಶ ಮಾಗಡಿಯವರಿಗಿದೆ, ಶಿಡ್ಲಘಟ್ಟದವರಿಗಿದೆ, ಚಿಕ್ಕಬಳ್ಳಾಪುರದವರಿಗಿದೆ, ಚಾಮರಾಜನಗರದವರಿಗೆ ಇದೆ ಎಲ್ಲರಿಗೂ ಇದೆ. ರೈತರಿಗೆ ತೊಂದರೆಯಾಯಿತೆಂದರೆ ಸ್ವಾಭಾವಿಕವಾಗಿ ನಮಗೆಲ್ಲರಿಗೂ ಕೂಡ ಸ್ವಲ್ಪ ರಕ್ತದ ಒತ್ತಡ ಜಾಸ್ತಿಯಾಗುತ್ತದೆ. ಆದರೆ ರೀಲರ್ಸ್ ಅನ್ನು ಇವತ್ತು ಕರೆಯಿಸುತ್ತೇವೆ, ಈಗ ಅವರಿಗೆ ಓಪನ್ ಇನ್‌ವಿಟೇಷನ್ ಕೊಡುತ್ತಿದ್ದೇವೆ, ಬಂದು ಅವರು ಮಂತ್ರಿಗಳಜೊತೆಯಲ್ಲಿ ಚರ್ಚೆ ಮಾಡಲಿ ತಾವು ಆ ಚರ್ಚೆಯಲ್ಲಿ ಭಾಗವಹಿಸಬಹುದು, ಸಹಾಯಕರಾಗಿ, ನಾವು ನೀವು ಎಲ್ಲರೂ ಒಟ್ಟಿಗೆ ಸೇರಿ ಈ ರೈತರಿಗಾಗುತ್ತಿರುವ ತೊಂದರೆಯನ್ನು, ಆದರಲ್ಲೂ ಈ ರೇಷ್ಮೆ ಬೆಳೆಗಾರರು ಬಹಳ ಕಷ್ಟದಲ್ಲಿದ್ದಾರೆಂಬುದನ್ನು ಅರ್ಥ ಮಾಡಿಕೊಂಡಿದ್ದೇನೆ, ಆದುದರಿಂದ ಒಂದು ವಿಶೇಷವಾದ ಡಿಸ್ಪೆನ್‌ಸೇಷನ್ ಅನ್ನು ರೇಷ್ಮೆ ಬೆಳೆಗಾರರ ವಿಚಾರದಲ್ಲಿ ತೋರಿಸಿದ್ದೇವೆ, ಆದುದರಿಂದ ತಾವೂ ಕೂಡ ಅವರಿಗೆ ಅಡ್ವೈಸ್ ಮಾಡಿದರೆ ಒಳ್ಳೆಯದು.

ಶ್ರೀ ಸಿ. ಬೈರೇಗೌಡ: ರೈತರು ಹಾಗೂ ರೀಲರ್ಸ್ ಇಂದ ಪ್ರೈಸ್ ಸ್ಟೇಬಲೈಸೇಷನ್ ಫಂಡ್ ಎಂದಿದೆ, ನನ್ನ ಲೆಕ್ಕದಲ್ಲಿ ಇದುವರೆವಿಗೆ ಸುಮಾರು ಈ ಬಾಬಿನಲ್ಲಿ ನೂರು ಕೋಟಿ ರೂಪಾಯಿಗಳವರೆಗೆ ಬಂದಿದೆ, ಸಾಕಷ್ಟು ಹಣ ಕೂಡ ಖರ್ಚಾಗಿದೆ, ಖರ್ಚಾಗಿಲ್ಲವೆಂದು ಹೇಳುತ್ತಿಲ್ಲ, ಆ ಹಣದಿಂದ ಅವರಿಗೆ ಬಡ್ಡಿ ವಜಾ ಮಾಡಿ ಎಂದು ಹೇಳುತ್ತಿದ್ದೇವೆ. ನಮ್ಮ ಸರ್ಕಾರ ಅಧಿಕಾರದಲ್ಲಿದ್ದಾರೆ ನಾವು ಮಾಡಿದ್ದೇವೆ, ನಮ್ಮ ಸರ್ಕಾರ ಬದಲಾವಣೆಯಾದ ಕಾರಣ, ಆಗಿನ ಸರ್ಕಾರ ಏನು ಕ್ರಮ ತೆಗೆದುಕೊಳ್ಳಬೇಕೋ ಅದನ್ನು ತೆಗೆದುಕೊಂಡಿದೆ.

ಶ್ರೀ ಹೆಚ್.ಎಂ. ರೇವಣ್ಣ: ತಾವು 16 ದಿವಸ ಕೊಟ್ಟಿದ್ದಿರಿ, ಈಗ ನೋಡಿದರೆ 2004ರವರೆಗೆ ಕೊಡಿ ಎಂದು ಹೇಳುತ್ತಿದ್ದೀರಿ, ನಿಮ್ಮ ಆದೇಶ ಏನಿದೆ?

ಶ್ರೀ ಸಿ. ಬೈರೇಗೌಡ: ಹೌದು, ಪರಿಸ್ಥಿತಿ ಅವತ್ತಿನಿಂದ ಇಲ್ಲಿಯವರೆಗೆ ಸುಧಾರಣೆಯಾಗಿಲ್ಲ ಇದನ್ನು ತಾವು ಗಮನದಲ್ಲಿಟ್ಟುಕೊಳ್ಳಿ, ಸುಧಾರಣೆಯಾಗಿದ್ದರೆ ಇದನ್ನು ತೆಗೆಯಿರಿ, ಬೆಲೆ ಏನಾಗಿದೆ ಎನ್ನುವ ಬಗ್ಗೆ ತಾವೇ ನಿನ್ನೆ ಉತ್ತರ ಕೊಡುವ ಸಂದರ್ಭದಲ್ಲಿ 90 ರೂ.ವರೆಗೆಯಾದರೂ ಹೋಗಿದೆ 40-50 ರೂಪಾಯಿಗಳಿಗೆ ಮಾರಾಟವಾಗುತ್ತಿತ್ತು ಎನ್ನುವ ಮಾತನ್ನು ಹೇಳಿದಿರಿ, ಅಂದರೆ ಆಗಿನ ಕಾಲದಲ್ಲಿ 250 ರೂ.ಗೂಡು ಇತ್ತು 1800 ರೂ.ಇದ್ದಂತ ರೇಷ್ಮೆ ಒಂದೇ ತಿಂಗಳಲ್ಲಿ ದಿಢೀರನೆ 800 ರೂ.ಗೆ ಇಳಿಯಿತು ಒಂದು ಕೆ.ಜಿ.ರೇಷ್ಮೆ ಮೇಲೆ ಅವರಿಗೆ ಒಂದು ಸಾವಿರ ರೂಪಾಯಿ ಹೋಯಿತು, ಆ ನಷ್ಟವನ್ನು ಅವರು ಇಲ್ಲಿಯವರೆಗೆ ಭರಿಸಲಾಗಲಿಲ್ಲ, ಆದುದರಿಂದ ಇವತ್ತಿನ ಪರಿಸ್ಥಿತಿಯನ್ನು ಅನುಸರಿಸಿ ಅವಧಿಯನ್ನು ವಿಸ್ತಾರ ಮಾಡುವುದು ಮತ್ತು ಅಧಿಕೃತವಾದ ಹಣಕಾಸು ಸಂಸ್ಥೆಗಳಿದ್ದಾವೆ, ಎಲ್ಲಾ ಸಂಸ್ಥೆಗಳಿಂದ ತೆಗೆದುಕೊಂಡಿರುವ ಸಾಲದ ಮೇಲಿನ ಬಡ್ಡಿಯನ್ನು ಮನ್ನ ಮಾಡುವುದು ಈ ಎರಡು ಮುಖ್ಯವಾದ ಬೇಡಿಕೆಗಳಿಗೆ ಸರ್ಕಾರ ಒಪ್ಪಿದರೆ, ಆಗ ನಮಗೂ ಕೂಡ ಕೆಲವರು ಗೊತ್ತಿರುವವರು ಇದ್ದಾರೆ, ನಮ್ಮ ವೈಯಕ್ತಿಕವಾದ ವರ್ಚಸ್ಸನ್ನು ಅವರ ಮೇಲೆ ಬೀರಿ ಕಡ್ಡಾಯವಾಗಿ ನೀವು ಮಾಡಬೇಕೆಂದು ಅವರ ಮನಸ್ಸನ್ನು ಒಲಿಸತಕ್ಕಂಥ ಕೆಲಸವನ್ನು ಮಾಡುತ್ತೇವೆ, ದಯವಿಟ್ಟು ಈ ಎರಡು ಬೇಡಿಕೆಗಳಿಗೆ ತಾವು

ಸಕಾರಾತ್ಮಕವಾಗಿ ಪ್ರತಿಕ್ರಿಯಿಸಿದರೆ ಸಮಸ್ಯೆ ಬಗೆಹರಿಯುತ್ತದೆ, ದಯವಿಟ್ಟು ಆ ಕೆಲಸವನ್ನು ಮಾಡಿ.

ಶ್ರೀ ವೈ.ಕೆ. ರಾಮಯ್ಯ (ಹುಲಿಯೂರುದುರ್ಗ): ಈ ನೂಲು ಬಿಚ್ಚುವವರ ಮುಷ್ಕರ ಯಾರ ವಿರುದ್ಧ ಸ್ವಾಮಿ? ಸರ್ಕಾರದ ವಿರುದ್ಧವಾದರೆ ನಾನು ಒಪ್ಪಿಕೊಳ್ಳುತ್ತೇನೆ. ಯಾರು ಈ ನೇಕಾರರಿಗೆ ಮತ್ತು ದಾರಬಿಚ್ಚುವವರಿಗೆ ಅನ್ನ ಕೊಡುವ ದಾತನಿದ್ದಾನೋ, ಅವನ ವಿರುದ್ಧವಾಗಿ ಇವರು ಮುಷ್ಕರ ಮಾಡುತ್ತಿರುವುದು ನಾನು ಅವತ್ತು ಹೇಳಿದೆ, ಮಾನವೀಯ ಮೌಲ್ಯಗಳನ್ನು ನಾವ್ಯಾರೂ ಗುತ್ತಿಗೆ ತೆಗೆದುಕೊಂಡಿಲ್ಲ ಎಲ್ಲರಿಗೂ ಇದೆ. ಈ ಪ್ರಶ್ನೆ ಬಹಳ ದಿವಸಗಳಿಂದ ಇದೆ. ಅವರ ಅಸೋಷಿಯೇಷನ್ ಶಿಡ್ಲಘಟ್ಟದಲ್ಲಿ ಒಂದಿದೆ, ರಾಮನಗರದಲ್ಲಿ ಒಂದಿದೆ, ಚಾಮರಾಜನಗರದಲ್ಲಿ ಒಂದಿದೆ ಹೀಗೆ ಬೇರೆ ಬೇರೆ ಅವರಲ್ಲಿಯೇ ಇದೆ, ಅದರ ಬಗ್ಗೆ ಚರ್ಚೆ ಬೇಡ. ಬಡ್ಡಿ ಮನ್ನಾ ಮಾಡಬೇಕೆ ಇಲ್ಲವೇ ಎನ್ನುವ ಬಗ್ಗೆ ನಾನು ಏನೂ ಹೇಳುವುದಕ್ಕೆ ಹೋಗುವುದಿಲ್ಲ, ಆ ವಿಚಾರವನ್ನು ಸರ್ಕಾರಕ್ಕೆ ಬಿಡುತ್ತೇನೆ. ಇವತ್ತು ಪ್ರಶ್ನೆ ಇರುವುದು ಇಷ್ಟೆ, ನೂಲು ಬಿಚ್ಚುವವರು ಇವತ್ತು ಯಾರ ವಿರುದ್ಧ ಮುಷ್ಕರ ಮಾಡುತ್ತಿದ್ದಾರೆ? ನಾಳೆ ಬೆಳಿಗ್ಗೆ ಗೂಡನ್ನು ಬೆಳೆಯದೇ ಇದ್ದರೆ, ಬೆಳಿಗಾರ ಇವರ ರಾಟೆ ಎಲ್ಲಿಗೆ ಹೋಗುತ್ತಿದೆ? ಇವರ ದಾರ ಎಲ್ಲಿ ಹೋಗುತ್ತದೆ?ಇವರು ಅನ್ನಕ್ಕೆ ಯಾರನ್ನು ಅವಲಂಬಿಸಬೇಕಾಗುತ್ತದೆ? ಅವರ ವಿರುದ್ಧ ಮುಷ್ಕರ ಮಾಡುವುದನ್ನು ನಿಲ್ಲಿಸಿ, ಸರ್ಕಾರದ ಮುಂದೆ ಕುಳಿತು ಚರ್ಚೆ ಮಾಡುವುದು ಸರಿಯಾದ ಮಾರ್ಗವಾಗಿದೆ. ಅವರು ಮುಷ್ಕರವನ್ನು ನಿಲ್ಲಿಸದಿದ್ದರೆ, ನಾನು ಸರ್ಕಾರದಲ್ಲಿ ಇದೇನು ಮೊದಲನೆ ಸಾರಿ ಪ್ರಾರ್ಥನೆ ಮಾಡೀಕೊಳ್ಳುತ್ತಿಲ್ಲ, They are threating the farmers since several years. I think the govt will have to interfere and protect the farmers. ಆ ರಕ್ಷಣೆಯನ್ನು ಈ ಸರ್ಕಾರ ಮಾಡೇ ಮಾಡುತ್ತದೆ, ನಾವೆಲ್ಲಾ ಸರ್ಕಾರದ ಮೇಲೆ ಒತ್ತಾಯ ತರುತ್ತೇವೆ. ಅದಕ್ಕಿಂತ ಮೊದಲು ಯಾರು ಅನ್ನದಾತನಿದ್ದಾನೋ, ಅವನ ವಿರುದ್ಧ ಮುಷ್ಕರ ಮಾಡುವುದನ್ನು, ಅನ್ನದಾತನ ಅನ್ನವನ್ನೇ ಕಿತ್ತುಕೊಳ್ಳುವುದನ್ನು, ರೈತರಿಗೆ ಅನ್ಯಾಯ ಮಾಡುವುದಕ್ಕಾಗಿ ಮುಷ್ಕರ ಮಾಡುವುದನ್ನು ಅವರು ನಿಲ್ಲಿಸಬೇಕೆಂದು ಈ ಸದನ ಮುಖೇನ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ. ಇದು ಮೊದಲನೆ ಸಾರಿಯಲ್ಲಿ, ರಾಜಮಹಾರಾಜರ ಕಾಲದಿಂದಲೂ ಬಂದಿದೆ, ಇದಕ್ಕೆ ಒಳಗಡೆ ಬಹಳಷ್ಟು ಉರ್ಣವಿದೆ ಉಪಾಧ್ಯಕ್ಷರೆ, ಇದನ್ನು ಅರಿತುಕೊಂಡ ಇವರು ಇದೇ ರೀತಿಯಾಗಿ ರೈತರಿಗೆ ತೊಂದರೆ ಕೊಡುತ್ತಾರೆಂದು ಮೈಸೂರು ಮಹಾರಾಜರು ಫಿಲೇಚರ್ಸ್ ತೆಗೆದರು, ಆದರೆ ಕಾಲಾಂತರದಲ್ಲಿ ಖಾಸಗೀಕರಣ ಜಾಸ್ತಿಯಾದಂತೆ ಇವತ್ತು ಇವರು ಮುಷ್ಕರ ಮಾಡುವುದು ರೈತರ ವಿರುದ್ಧ, ಅದನ್ನು ಇವರು ವಾಪಸ್ ತೆಗೆದುಕೊಳ್ಳಲಿ, ಸರ್ಕಾರದ ಜೊತೆ ಚರ್ಚೆ ಮಾಡಲಿ, ಅವರದ್ದು ಲೆಜಿಟಿಮೇಟ್ ಡಿಮಾಂಡ್ಸ್ ಇದ್ದರೆ ನಾವೂ ಸೇರಿಕೊಳ್ಳೋಣ, ಅವರೇನಾದರೂ ಅದನ್ನು ಮಾಡದೇ ಇದ್ದರೆ, ಬೈರೇಗೌಡರು ಒಬ್ಬರೆ ಅಲ್ಲ.. (ಪಿ.ಜಿ.ಆರ್. ಸಿಂಧ್ಯಾರವರನ್ನು ಉದ್ದೇಶಿಸಿ) ಇವರೆಲ್ಲಾ ಮಾತನಾಡುವಾಗ ನಾವು ಇಲ್ಲಿ ಸುಮ್ಮನೆ ಕುಳುತುಕೊಳ್ಳುವುದಿಲ್ಲವೆ, ನನಗೆ ಅರ್ಥವಾಗುತ್ತಿಲ್ಲ, ಯಾವುದಾದರೂ ಒಂದು ವಿಷಯ ಬಂದರೆ ಯಾವುದಾದರೂ ಒಂದು ಸಮಸ್ಯೆ ಬಂದರೆ ಇದು ಕೆಲವರಿಗೆ ಸಂಬಂಧಿಸಿದ ಸಮಸ್ಯೆ ಎಂದು ಸೀಮಿತಗೊಳಿಸುವುದು ಸರಿಯಲ್ಲ. ಅವರು ಹತ್ತು ಸಾರಿ ಎದ್ದು ನಿಲ್ಲುತ್ತಾರೆ, ನಾನು ಯಾವಾತ್ತಾದರೂ ಅಡ್ಡಿ ಮಾಡುತ್ತೇನೆಯೇ? ನೀವು ಹೇಳುವುದು ಸರಿಯಿಲ್ಲವೆಂದು ಹೇಳುತ್ತಿನಾ? ಏನು ಅವರು

ಹೇಳುವುದೆಲ್ಲಾ ಪರಮ ಸತ್ಯವೇ ? ಎಷ್ಟು ಸತ್ಯ ಎಷ್ಟು ಸತ್ಯವಲ್ಲವೆನ್ನುವುದು ನನಗೆ ಗೊತ್ತಿದೆ, ಆದರೂ ಕೂಡ ನಾವು ಕುಳಿತುಕೊಂಡು ಕೇಳುತ್ತಿರುತ್ತೇವೆ. ಪ್ರಜಾಪ್ರಭುತ್ವದಲ್ಲಿ ಇದು ಸಹಜವಾದುದು, ಅವರು ಏನು ಹೇಳುತ್ತಾರೆಯೋ ಅದನ್ನೆಲ್ಲಾ ಬಹಳ ಗಂಭೀರವಾಗಿ ಕುಳಿತುಕೊಂಡು ಕೇಳುತ್ತಿರುತ್ತೇನೆ, ಅದಕ್ಕೆ ಎಷ್ಟೆಷ್ಟು ಬೆಲೆ ಕೊಡಬೇಕೋ ಅದನ್ನು ನನ್ನ ಮನಸ್ಸಿನಲ್ಲಿ ಕೊಡುತ್ತೇನೆ. ಕೇಳಬೇಕಾಗುತ್ತದೆ ಕೇಳುತ್ತೇನೆ, ಆದುದರಿಂದ ನಾನು ಹೇಳಿದ್ದನ್ನು ಕೇಳುವಂತಹ ಸಹನೆ ಅವರು ಇಟ್ಟುಕೊಳ್ಳಬೇಕಾಗುತ್ತದೆ. ನೀವು ಆರೂವರೆ, ಏನು ಗಂಟೆಯವರೆಗೆ ಭಾಷಣವನ್ನು ಮಾಡಿದ್ದನ್ನು ನಾವು ಇಲ್ಲಿ ಕುಳಿತುಕೊಂಡು ಕೇಳಬೇಕು, ನಾನು ಎರಡು ನಿಮಿಷ ಹೇಳಿದ್ದನ್ನು ಕೇಳುವುದಕ್ಕಾಗುವುದಿಲ್ಲವೆಂದರೆ ಹೇಗೆ ಸ್ವಾಮಿ? ಆಯ್ಯೋ ರಾಮ ಎಂದು ಅಸಹ್ಯ-ಪಟ್ಟುಕೊಂಡರೆ ನಾನು ಹೇಳುವುದೇನು ಉಪಯೋಗವಿಲ್ಲವೆಂದು ಅರ್ಥವೇ?

ಶ್ರೀ ಸಿ. ಬೈರೇಗೌಡ: ರಾಮನ ಹೆಸರಲ್ಲ ಸ್ವಾಮಿ, ರಾಮಯ್ಯ ನವರೇ, ಎಂದು ಹೆಸರು ಇರುವುದು.

ಶ್ರೀ ವೈ.ಕೆ. ರಾಮಯ್ಯ: ಬೈರೇಗೌಡರೆ, ನೀವು ಹೇಳುವುದು ನೋಡಿದರೆ, ನಾವು ಹೇಳುವುದೆಲ್ಲಾ ನಿರುಪಯುಕ್ತವಾದುದು, ನಾವು ಹೇಳುವುದೆಲ್ಲಾ ಕೆಲಸಕ್ಕೆ ಬಾರದಿರುವುದು, Whta is that gesture? Tell me. ಮಾನ್ಯ ಉಪಾಧ್ಯಕ್ಷರೆ, ನಮ್ಮ ಪ್ರಾರ್ಥನೆ ಇಷ್ಟೆ, ಅವರು ರೈತರ ವಿರುದ್ಧವಾಗಿ ಮುಷ್ಕರವನ್ನು ಮಾಡುತ್ತಿದ್ದಾರೆ, ನಾಳೆ ರೈತರು ಇವರ ವಿರುದ್ಧವಾಗಿ ಮುಷ್ಕರವನ್ನು ಮಾಡುತ್ತಾರೆ, ಅದನ್ನು ಇವರನ್ನು ಕೇಳಿಕೊಂಡು ಮಾಡಬೇಕಾಗಿಲ್ಲ, ಅದಕ್ಕೂ ಸಂಘಟನೆ ಇದೆ, ಕರ್ನಾಟಕ ರೇಷ್ಮೆ ಬೆಳೆಗಾರರ ಸಂಘ ಇದೆ, ನಾನೇ ಅದರ ಅಧ್ಯಕ್ಷನಾಗಿದ್ದೇನೆ, ನಾನೇ ಅವರ ವಿರುದ್ಧ ಮುಷ್ಕರಕ್ಕೆ ಕರೆ ಕೊಡುತ್ತೇನೆ. ಆದುದರಿಂದ ಸಿಂಧ್ಯಾರವರು ಹೇಳಿದಂತೆ ಸಂಘರ್ಷ ಬೇಡ, ಸಂಘರ್ಷದಿಂದ ಸಮಸ್ಯೆಯನ್ನು ಬಗೆಹರಿಸಿಕೊಳ್ಳುವುದಕ್ಕೆ ಸಾಧ್ಯತೆ ಇಲ್ಲ. ಇಲ್ಲಿ ಮೂರು ಹಿತಾಸಕ್ತಿಗಳಿವೆ, ನೂಲು ತೆಗೆಯುವವರಿದ್ದಾರೆ, ನೇಯ್ಗೆ ಮಾಡುವವರಿದ್ದಾರೆ ಮತ್ತು ಬೆಳೆ ಮಾಡತಕ್ಕಂಥವರಿದ್ದಾರೆ, ಈಗ ನೂಲು ತೆಗೆಯುವಂಥವರು ಬೆಳೆ ಮಾಡುವವರ ವಿರುದ್ಧ ಮುಷ್ಕರವನ್ನು ಮಾಡುತ್ತಿದ್ದಾರೆ, ಬೆಳೆಗಾರರು ಇವತ್ತು, ನಾಳೆ ನೋಡುತ್ತಾರೆ, ನಂತರ ಬೆಳೆಗಾರರೂ ಅವರ ವಿರುದ್ಧವಾಗಿ ಮುಷ್ಕರವನ್ನು ಪ್ರಾರಂಭ ಮಾಡುತ್ತಾರೆ. ಆದ್ದರಿಂದ ಸಂಘರ್ಷಕ್ಕೆ ಎಡೆಮಾಡಿಕೊಡುವುದು ಬೇಡ. ಸಮಸ್ಯೆಯನ್ನು ಬಗೆಹರಿಸಿ ಎಂದು ಅವರು ಹೇಳಿರುವುದಕ್ಕೆ ನಾನೂ ಅವರ ಜೊತೆಯಲ್ಲಿ ಧ್ವನಿಗೂಡಿಸುತ್ತೇನೆ. ಸಂಘರ್ಷದಿಂದ ರೈತರಿಗೆ ಅನ್ಯಾಯವಾಗುತ್ತದೆ. ಆದ್ದರಿಂದ, ಅವರು ಮುಷ್ಕರವನ್ನು ವಾಪಸ್ಸು ತೆಗೆದುಕೊಂಡು ಸಹಕಾರ ಮಾಡಲಿ. ಸರ್ಕಾರ ಅವರಿಗೆ ಏನು ಸಹಾಯ ಮಾಡಬೇಕೋ ಅದನ್ನು ಮಾಡಲಿ, ನಾನು ಸರ್ಕಾರದಲ್ಲಿ ಕೊನೆಯದಾಗಿ ಅತ್ಯಂತ ವಿನಯದಿಂದ ಒತ್ತಾಯ ಮಾಡುತ್ತಿದ್ದೇನೆ, ಇದು ಆಗದಿದ್ದರೆ, ರೈತನು ಬೆಳೆದಿರುವಂಥ ಗೂಡನ್ನು ಕೊಂಡುಕೊಂಡು, ರೀಲರ್‌ಗಳಿಂದ ಅನ್ಯಾಯವಾಗುತ್ತಿರುವ ಬೆಳೆಗಾರರಿಗೆ ರಕ್ಷಣೆ ಕೊಡಬೇಕು ಎಂದು ಮತ್ತೊಂದು ಸಾರಿ ಒತ್ತಾಯಪೂರ್ವಕವಾಗಿ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಬಿ.ಸೋಮಶೇಖರ್ (ಮಳವಳ್ಳಿ): ಇವತ್ತು ನಾವು ಎಂಥ ಸಂದಿಗ್ಧ ಪರಿಸ್ಥಿತಿಯಲ್ಲಿದ್ದೇವೆಂದರೆ, ಸುಮಾರು 2-3 ಗಂಟೆಗಳು ತಡವಾದರೂ ಕೂಡ ಕಷ್ಟಕ್ಕೆ ಸಿಕ್ಕಿ ಹಾಕಿಕೊಳ್ಳತಕ್ಕಂಥವರು ರೇಷ್ಮೆ ಬೆಳೆಗಾರರು, ಮಾನ್ಯ ರೇಷ್ಮೆ ಸಚಿವರು ಹೇಳಿದ ಹಾಗೆ, ರೀಲರ್ಸ್‌ಗಳು ಅವರ ಹತ್ತಿರ ಬಂದು ಚರ್ಚೆ ಮಾಡದೇ ಇರಬಹುದು, ಅವರದೂ ಕೆಲವು ಲ್ಯಾಪ್ಸಸ್ ಇದ್ದರೂ ಇರಬಹುದು.

ನಮಗೆಲ್ಲಾ ಗೊತ್ತಿರತಕ್ಕಂಥ ಒಂದು ಅನುಭವವೆಂದರೆ, ಟೀಚರ್‌ಗಳೂ ಒಂದು ಸಂದರ್ಭದಲ್ಲಿ ಸ್ಟ್ರೈಕ್ ಮಾಡುತ್ತಾರೆ, ರೀಲರ್ಸ್‌ಗಳೂ ಒಂದು ಸಂದರ್ಭದಲ್ಲಿ ಸ್ಟ್ರೈಕ್ ಮಾಡುತ್ತಾರೆ, ಈ ಸ್ಟ್ರೈಕ್‌ಗಳು ಏಕೆಂದರೆ, ಅವರ ಹಿತವನ್ನು ಕಾಪಾಡಿಕೊಳ್ಳತಕ್ಕಂಥಾದ್ದಕ್ಕೆ. ಟೀಚರ್ಸ್‌ಗಳು ಮುಷ್ಕರ ಮಾಡಿದರೆ, ಈ ರಾಜ್ಯದ ಪೋಷಕರಿಗೆ ಮತ್ತು ವಿದ್ಯಾರ್ಥಿಗಳಿಗೆ ಹಾಗೂ ರೀಲರ್ಸ್‌ಗಳು ಮುಷ್ಕರ ಮಾಡಿದರೆ ರೇಷ್ಮೆ ಬೆಳೆಗಾರರಿಗೆ ಅನಾನುಕೂಲವಾಗುತ್ತದೆ. ಇಂಥ ಪರಿಸ್ಥಿತಿಯಲ್ಲಿ ಎರಡು ವಿಚಾರಗಳನ್ನು ತಾವು ಮನಸ್ಸಿನಲ್ಲಿಟ್ಟುಕೊಳ್ಳಬೇಕು. ತಾವು ಅವರನ್ನು ಕರೆದು ಚರ್ಚೆ ಮಾಡತಕ್ಕಂಥಾದ್ದು ಒಂದು ವಿಚಾರ, ನಮ್ಮ ಸರ್ಕಾರವಿದ್ದಾಗ, ನಾವು ಒಂದು ತೀರ್ಮಾನ ತೆಗೆದುಕೊಂಡು, ಕೊಡಬೇಕು ಎನ್ನುವ ಆದೇಶವನ್ನು ಹೊರಡಿಸಿದ್ದೆವು. ಆದರೆ ಅದಕ್ಕೆ ಹಣವನ್ನು ಒದಗಿಸಿಕೊಡಲು ಆಗಲಿಲ್ಲ. ಅದು ನಮ್ಮ ತಪ್ಪು ಆಗಿರಬಹುದು. ನಾವು ಇನ್ನೂ ಸ್ವಲ್ಪ ಕಾಲ ಇದ್ದಿದ್ದರೆ ಅದನ್ನು ಕೊಡುತ್ತಿದ್ದೆವು. ಆದರೆ, ಈಗ ಅವರು ಹೇಳಿರತಕ್ಕಂಥ ಬೇಡಿಕೆ ಸಮಂಜಸವಾಗಿದೆ ಎಂದು ತಮಗೆ ಗೊತ್ತಾದಾಗ, ನಾವು ಅದನ್ನು ಒಪ್ಪಿದ್ದೇವೆ ಎಂದು ತಾವು ಹೇಳುವುದರಲ್ಲಿ ತಪ್ಪೇನಿದೆ? ಸಮಂಜಸವಲ್ಲ ಎಂದು ಗೊತ್ತಾದಾಗ ಅದು ಬೇರೆ ವಿಚಾರ, ಇವತ್ತು ಅವರ ಎರಡು ಬೇಡಿಕೆಗಳು ಸಮಂಜಸ ಎಂದು ಕಂಡ ಮೇಲೆ ಅವುಗಳನ್ನು ತಾವು ಒಪ್ಪಿಕೊಂಡರೆ, ತಕ್ಷಣ ಅವರು ಗೂಡನ್ನು ಖರೀದಿ ಮಾಡಬಹುದು. ಆದ್ದರಿಂದ, ಈ ವಿಚಾರದಲ್ಲಿ ತಾವು ಪ್ರೆಸ್ಟೀಜನ್ನು ಇಟ್ಟುಕೊಳ್ಳದೇ, ಸಂಘರ್ಷಕ್ಕೂ ಎಡೆ ಮಾಡಿಕೊಡದೇ, ಎರಡು ಬೇಡಿಕೆಗಳನ್ನಾದರೂ ನಾವು ಒಪ್ಪಿಕೊಂಡಿದ್ದೇವೆ ಎಂದು ತಾವು ಘೋಷಣೆ ಮಾಡಿದರೆ ಬಹುಶಃ ಈ ಎಲ್ಲ ಸಮಸ್ಯೆಗಳು ಪರಿಹಾರವಾಗಬಹುದು ಎಂದು ನಾನೂ ಸಹ ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ವೈ.ಕೆ. ರಾಮಯ್ಯ: ರೈತರು ಎಲ್ಲಾ ಬೇಡಿಕೆಗಳನ್ನು ತಾವು ಒಪ್ಪಿಕೊಳ್ಳುವಿರಾ, ಸ್ವಾಮಿ? ಕಳೆದ 32 ವರ್ಷಗಳಿಂದ, ರೈತರ ಬೇಡಿಕೆಗಳನ್ನು ನಮ್ಮ ಸರ್ಕಾರದ ಮುಂದೆಯೂ ಇಟ್ಟಿದ್ದೇನೆ, ಅವರ ಸರ್ಕಾರದ ಮುಂದೆಯೂ ಇಟ್ಟಿದ್ದೇನೆ. ನಾನು ಮಂತ್ರಿಯಾಗಿದ್ದಾಗಲೂ ಸಹ, ಈ ರಾಜ್ಯದ ರೈತರ ಸಮಸ್ಯೆಯನ್ನು ಬಗೆಹರಿಸಲು ಆಗಲಿಲ್ಲ. ಸರ್ಕಾರ ನಡೆಸಿದಂಥ ಇವರು, ಬೆಳೆಯುವ ಬೆಳೆಗಾರರಿಗೆ ಒಂದು ರೂಪಾಯಿಯ ಬೋನಸ್ಸನ್ನೂ ಕೊಡಲಿಲ್ಲ. ಇವತ್ತು ನನ್ನ ಬೇಡಿಕೆಯನ್ನೂ ಮುಂದಿಡುತ್ತಿದ್ದೇನೆ. ಅದನ್ನು ನೆರವೇಸಿರುತ್ತಾರೆಯೇ? This 1% reelers dictate terms to the 99% of the benficiaries, can the 99% beneficiaries should tolerate this? ನಾನು ಒಪ್ಪಿಕೊಳ್ಳುತ್ತೇನೆ, ರೀಲರ್ಸ್ ಡಿಮ್ಯಾಂಡ್ ಏನೇನಿದೆ ಎಂದು ಸರ್ಕಾರದ ಮೇಲೆ ಒತ್ತಾಯ ತರುತ್ತೇನೆ. ವ್ಯಾಪಕವಾಗಿ ಚರ್ಚೆ ನಡೆಯಲಿ, ಆದರೆ, ಅಷ್ಟು ಕಷ್ಟಬಿದ್ದು ಬೀಜವನ್ನು ಬೆಳೆದು ಕೊಡುವಂಥ ರೈತರಿಗೆ ನೀವು ಸರ್ಕಾರದಿಂದ ಬೋನಸ್ ಕೊಡಿಸಿದ್ದೀರೇನು? ನನ್ನ ಬೇಡಿಕೆ ಇಲ್ಲವೇನು? ಬೆಳೆಗಾರರ ಬೋನಸ್ ರಿವೈಸ್ ಮಾಡಿ ಎಷ್ಟು ದಿನವಾಯಿತು?ಯಾವ ಸರ್ಕಾರದಲ್ಲಿ ಎಷ್ಟೆಷ್ಟು ಕೊಟ್ಟುಕೊಂಡು ಬಂದಿದ್ದೀರಿ? ಅವರು ಮಾಡಿರುವ ಸಾಲದ ಬಡ್ಡಿ ಮನ್ನಾ ಮಾಡಿದ್ದೀರೇನು? ಬೆಳೆಗಾರರು ಪಿ ಎಫ್ ಡಿ ಬ್ಯಾಂಕಿನಲ್ಲಿ ಸಾಲ ಮಾಡಿಲ್ಲವೇನು? ಆದರೆ, ಸಿಂಧ್ಯಾರವರು ಹೇಳಿದ ಹಾಗೆ, ಇದರಲ್ಲಿ ಸಂಘರ್ಷ ಬೇಡ ಸಮಸ್ಯೆ ಬಗೆಹರಿಯಲಿ ಎಂದು ನಾನು ತಿಪ್ಪೆ ಸಾರಿಸಿಕೊಂಡು ಹೋಗುತ್ತಿದ್ದೇನೆ. ಅರ್ಥವಾಯಿತೇ, ಸ್ವಾಮಿ? ಬೆಳೆಗಾರರ ಡಿಮ್ಯಾಂಡ್‌ಗಳು, ರೀಲರ್ಸ್ ಡಿಮ್ಯಾಂಡ್ಸ್ ವೀವರ್ಸ್ ಡಿಮ್ಯಾಂಡ್ಸ್ ಎಲ್ಲದರ ಬಗ್ಗೆ ಚರ್ಚೆ ಮಾಡೋಣ. ಅವರಿಗೂ ಕೂಡ ಪರಿಹಾರ ಕೊಡಿ. ಅಂತೆಯೇ ಇವರಿಗೂ ಪರಿಹಾರ

ಕೊಡಿ, ನನ್ನದೇನೂ ಅಭ್ಯಂತರವಿಲ್ಲ. ಬೆಳೆಗಾರರ ಡಿಮ್ಯಾಂಡ್‌ಗಳೇನು ಎಂದು ಹೇಳಬೇಕು ಎಂದರೆ, ನಾನು ಈ ಘಳಿಗೆಯಲ್ಲಿ ಹೇಳಲು ಸಿದ್ಧನಾಗಿದ್ದೇನೆ. ಅವರೂ ಸಹ ಪಿ ಎಲ್ ಡಿ ಬ್ಯಾಂಕಿನಲ್ಲಿ ಸಾಲ ಮಾಡಿದ್ದಾರೆ, ಕೆ.ಎಸ್.ಎಫ್. ಸಿಯಲ್ಲಿ ಸಾಲ ಮಾಡಿದ್ದಾರೆ, ಗೊಬ್ಬರದ ಅಂಗಡಿಯಲ್ಲಿ ಸಾಲ ಮಾಡಿದ್ದಾರೆ. ಅವರ ಈ ಎಲ್ಲಾ ಸಾಲಗಳನ್ನೂ ಕೂಡ ಮನ್ನಾ ಮಾಡಿ ಸ್ವಾಮಿ, ಇವರ ಜೊತೆಯಲ್ಲಿ ಅವರದೂ ಮನ್ನಾ ಮಾಡಿ. ನಾನು ಇವತ್ತು ಹೇಳುತ್ತಿದ್ದೇನೆ. ರೀಲರ್‌ಗಳ ಸಾಲವನ್ನು ಮನ್ನಾ ಮಾಡುವ ಹಂತಕ್ಕೆ ಬರುವುದಾದರೆ, ರೈತರ ಬೇಡಿಕೆಗಳು ಈಡೇರುವವರೆಗೆ ಬೇರೆ ವರ್ಗದವರ ಬೇಡಿಕೆಗಳನ್ನು ಈಡೇರಿಸಲು ನಮ್ಮ ಒಪ್ಪಿಗೆಯಿಲ್ಲ. ಈ ಬಗ್ಗೆ ನಾನು ಸರ್ಕಾರದ ಮೇಲೆ ಒತ್ತಾಯ ತರುತ್ತೇನೆ.

ಶ್ರೀ ಬಿ. ಸೋಮಶೇಖರ್: ಸಾಲ ಮನ್ನಾ ಅಲ್ಲ, ಬಡ್ಡಿ ಅಷ್ಟೇ.

ಶ್ರೀ ವೈ.ಕೆ. ರಾಮಯ್ಯ: ಇವರದ್ದೂ ಅಷ್ಟೇ. ಬೆಳೆಗಾರರ ಬಡ್ಡಿಯನ್ನೂ ಮನ್ನಾ ಮಾಡಿ. ಈಗ ಹೇಳಿ ನೀವು. ನೀವೇ ತೀರ್ಮಾನ ಮಾಡಿ, ಶೇಕಡ ಒಂದರಷ್ಟಿರುವ ರೀಲರ್‌ಗಳು ಬೇಕೋ ಅಥವಾ ಶೇಕಡ ತೊಂಬತ್ತೊಂಭತ್ತರಷ್ಟಿರುವ ಬೆಳೆಗಾರರು ಬೇಕೋ? ನನ್ನ ಜೊತೆಯಲ್ಲಿ ಎಲ್ಲರೂ ಬನ್ನಿ. ಸುಮ್ಮನೆ ವಾದ ಮಾಡಿಕೊಂಡು ಮುಂದಕ್ಕೆ ಹೋಗಲು ಆಗುವುದಿಲ್ಲ. ರೀಲರ್ಸ್ ಕೇವಲ ಶೇಕಡ ಒಂದರಷ್ಟಿದ್ದಾರೆ. ಅವರ ಬಡ್ಡಿಯನ್ನು ಮನ್ನಾ ಮಾಡುವುದಾದರೆ, ಶೇಕಡ ತೊಂಬತ್ತೊಂಭತ್ತರಷ್ಟಿರುವ ನಮ್ಮ ರೈತರ ಬಡ್ಡಿಯನ್ನೂ ಮನ್ನಾ ಮಾಡಿ.

ಶ್ರೀ ಎಸ್.ಎಸ್. ಪಾಟೀಲ್: ರೈತರು ಮಾಲೂ ಖರೀದಿ ಮಾಡಲು ಸರ್ಕಾರದವರು ಪರ್ಯಾಯ ವ್ಯವಸ್ಥೆ ಮಾಡಿದರೆ ಸಾಕು.

ಶ್ರೀ ವೈ.ಕೆ. ರಾಮಯ್ಯ: ನಾನು ಅದನ್ನು ಒಪ್ಪಿಕೊಳ್ಳುತ್ತೇನೆ. ಆಷ್ಟಾದರೆ ಸಾಕು.

ಶ್ರೀ ಎಸ್.ಎಸ್. ಪಾಟೀಲ್: ಒಂದು ವೇಳೆ ಖರೀದಿ ಮಾಡದಿದ್ದರೆ, ರೈತರಿಗೆ ಅದು ಲುಕ್ಸಾನನ್ನು ತುಂಬಿಕೊಡಬೇಕು. ಇದಕ್ಕೆ ತಮ್ಮದು ಒಪ್ಪಿಗೆ ಇದೆಯಲ್ಲವೇ? ರೈತರ ಮಾಲೂ ಖರೀದಿ ಮಾಡಬೇಕು, ಇಲ್ಲವೇ ಲುಕ್ಸಾನು ತುಂಬಿ ಕೊಡಬೇಕು.

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು): ಸನ್ಮಾನ್ಯ ಉಪಾಧ್ಯಕ್ಷರೇ, ಇಂದು ರೇಷ್ಮೆ ಬೆಳೆಗಾರರ ಸಂಕಷ್ಟದ ಬಗ್ಗೆ ಸುಧೀರ್ಘವಾದ ಚರ್ಚೆ ಯಾಗಿರತಕ್ಕಂಥಾದ್ದು ಸ್ವಾಗತಿಸುವಂಥದ್ದು. ನೂಲು ಬಿಚ್ಚುವವರ ಮುಷ್ಕರದಿಂದ ಪ್ರಾರಂಭವಾಗಿ, ಸಂಪೂರ್ಣವಾಗಿ ರೇಷ್ಮೆ ಬೆಳೆಗಾರರ ಬಗ್ಗೆ ಚರ್ಚೆಯಾಗಿರುವುದಕ್ಕೆ ನಾನು ಸ್ವಾಗತವನ್ನು ಹೇಳುತ್ತೇನೆ. ಮಾನ್ಯ ಬೈರೇಗೌಡರ ಸರ್ಕಾರ ಇದ್ದಂಥ ಸಂದರ್ಭದಲ್ಲಿ, ಅವರು ಕೊಟ್ಟಂಥ ಸಮಯದ ಅವಧಿ ಹದಿನಾರು ದಿವಸಗಳು, ಅಷ್ಟು ಸಮಯವನ್ನು ಕೊಟ್ಟು ಎರಡೂಕಾಲು ಕೋಟಿ ರೂಪಾಯಿಗಳಿಗೆ ತಂದು ನಿಲ್ಲಿಸಿದ್ದಾರೆ. ಅದನ್ನು ಇವತ್ತು ಸಾವು ತೀರಿಸುವಂಥ ಪರಿಸ್ಥಿತಿಗೆ ತಂದಿದ್ದು, ಅದನ್ನು ವೈ.ಕೆ. ರಾಮಯ್ಯನವರು ಚೆನ್ನಾಗಿ ಹೇಳಿದ್ದಾರೆ. ಇದೇ ಮನೆಯಲ್ಲಿ, ಇತ್ತೀಚೆಗೆ ಹಿರಿಯ ನಾಯಕರಾದ ಸಿಂಧ್ಯಾರವರು ಕಾಂಟ್ರಾಕ್ಟರ್‌ಗಳ ಬಾಕಿ ಬಗ್ಗೆ ಪ್ರಸ್ತಾಪ ಮಾಡಿದಾಗಲೂ ಕೂಡ ನಮ್ಮನಾಯಕರಾದ ಶ್ರೀಮಾನ್ ಎಸ್.ಎಂ.ಕೃಷ್ಣಾರವರು 100 ಕೋಟಿ ರೂಪಾಯಿ ಬಿಡುಗಡೆ ಮಾಡುತ್ತೇವೆ ಒಂದು ಒಪ್ಪಿಕೊಂಡಿದ್ದಾರೆ. ವಿರೋಧ ಪಕ್ಷದವರು ಮಂಡನೆ ಮಾಡಿರತಕ್ಕಂಥ ಅನೇಕ ವಿಷಯಗಳು ಸರಿಯಾಗಿವೆ ಎಂದು ನಮ್ಮ ಸರ್ಕಾರಕ್ಕೆ ಮನವರಿಕೆಯಾದಂಥ ಸಂದರ್ಭದಲ್ಲಿ ರೈತರ ಪರವಾಗಿ

ಮತ್ತು ಸಾರ್ವಜನಿಕರ ಪರವಾಗಿರತಕ್ಕಂಥ ಹೇಳಿಕೆಗಳನ್ನು ಕೊಟ್ಟಿರತಕ್ಕಂಥಾದ್ದು ಮತ್ತು ಅವರ ಕಷ್ಟಕ್ಕೆ ಬಂದಿರತಕ್ಕಂಥಾದ್ದಕ್ಕೆ ಅನೇಕ ನಿದರ್ಶನಗಳಿವೆ. ಇವತ್ತೂ ಕೂಡ ರೀಲರ್ಸ್ ಮುಷ್ಕರದ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಮಾನ್ಯ ಸೋಮಶೇಖರ್‌ರವರು ಹೇಳಿದ ರೀತಿಯಲ್ಲಿ ಆ ಗಡುವು ಅಥವಾ ಕಾಲಮಿತಿಯ ಬಗ್ಗೆ ನಾವು ಹೋಗುವುದು ಬೇಡ. ಇವತ್ತು ಪರಿಸ್ಥಿತಿ ಯಾವ ರೀತಿ ಇದೆಯೆಂದರೆ, ರೀಲರ್ಸ್ ಮುಷ್ಕರದಿಂದ ಪ್ರಾರಂಭವಾಗಿ ರೈತರ ಪರವಾಗಿ ಬಂದುಬಿಟ್ಟಿದೆ. ರೈತರ ಕಷ್ಟವನ್ನು ಎಲ್ಲರೂ ಒಪಿಪಕೊಂಡಿದ್ದೇವೆ. ಪ್ರಥಮವಾಗಿ, ನಾನು ಎವಡೂವರೆ ಕೋಟಿ ರೂಪಾಯಿ ಬಿಡುಗಡೆ ಮಾಡುವಂಥದ್ದಾನ್ನು ತಕ್ಷಣವೇ ಮಾಡುತ್ತಿದ್ದೇವೆ. ನಾನು ಅವರ ಜೊತೆಯಲ್ಲಿ ಮಾತನಾಡಿದ್ದೇನೆ. ಅವರು, ನಮಗೆ ಇನ್ನೂ ಸ್ವಲ್ಪ ಸಮಯ ಕೊಡಿ. ಅಸಲನ್ನು ತೀರಿಸುತ್ತೇವೆ. ಬಡ್ಡಿ ಮನ್ನಾ ಮಾಡಿ ಎಂದು ಬೇಡಿಕೆ ಇಟ್ಟಿದ್ದಾರೆ. ಕೆ.ಎಸ್.ಎಫ್.ಸಿಯಲ್ಲಿ ಒನ್ ಟೈಂ ಸಟ್ಲಿಮೆಂಟ್‌ನಲ್ಲಿ ಏನು ಅವಕಾಶವಿದೆ. ಆ ನಿಟ್ಟಿನಲ್ಲಿ ಇದನ್ನೂ ಕೂಡ ಪರಿಶೀಲಿಸುತ್ತೇವೆ. ಈಗ ರೀಲರ್ಸ್ ಅಸೋಸಿಯೇಷನ್ನಿನವರು ಬಂದಿದ್ದಾರೆ ಎನ್ನುವ ಮಾಹಿತಿ ನನಗೆ ಬಂದಿದೆ. ಅವರ ಜೊತೆಯಲ್ಲಿ ಮಾತನಾಡುತ್ತೇನೆ. ಯಾರು ಎಷ್ಟೇ ಉದ್ವೇಗದಿಂದ ಮಾತನಾಡಿದ್ದರೂ ಕೂಡ, ಎಲ್ಲರ ಉದ್ದೇಶ ಪರಿಸ್ಥಿತಿಯನ್ನು ತಿಳಿಗೊಳಿಸಬೇಕು ಎನ್ನುವುದಾಗಿದೆ ಎನ್ನುವುದನ್ನು ಅರಿತು, ನಾನು ಅವರ ಜೊತೆಯಲ್ಲಿ ಮಾತನಾಡುತ್ತೇನೆ. ಅವರಿಗೆ ಇನ್ನೂ ಸ್ವಲ್ಪ ಹೆಚ್ಚಿನ ಗಡುವನ್ನು ಕೊಟ್ಟು, ಈ ಮುಷ್ಕರವನ್ನು ನಿಲ್ಲಿಸುವುದಕ್ಕೆ ಪ್ರಯತ್ನವನ್ನು ಮಾಡುತ್ತೇವೆ. ಇವರು ಹಿಂದೆ 16 ದಿವಸಗಳ ಗಡುವನ್ನು ಕೊಟ್ಟಿದ್ದರೂ ನಾವು ಹೆಚ್ಚಿನ ಅವಧಿಯನ್ನು ಕೊಡುತ್ತೇವೆ. 2004ಕ್ಕೆ ಕೊಡಿ, 2005ಕ್ಕೆ ಕೊಡಿ ಎಂದು ಹೇಳುವುದು ಬೇಡ. ಇನ್ನೂ ಹೆಚ್ಚಿನ ಕಾಲಾವಧಿಯನ್ನು ಕೊಟ್ಟು. ಪರಿಸ್ಥಿತಿಯನ್ನು ಅರಿತು ನಾವು ಅದಕ್ಕೆ ಸ್ಪಂದಿಸುತ್ತೇವೆ. ನಾವು ಇಷ್ಟು ಹೇಳಿದರೂ ಸಹ, ನೀವು ಹೀಗೇ ಮಾಡಿ ಎಂದು ಬೈರೇಗೌಡರು ಹೇಳುವುದಾದರೆ, ಅವರ ನಿರ್ದೇಶನದಂತೆ ನಾವು ನಡೆಸಲು ಆಗುವುದಿಲ್ಲ.

ಶ್ರೀ ಸಿ. ಬೈರೇಗೌಡ: ನಾನು ಏನೂ ಹೇಳಲೇ ಇಲ್ಲ. ಸುಮ್ಮನೆ ಕುಳಿತಿದ್ದೇನೆ.

ಶ್ರೀ ಎಸ್.ಎಂ.ಕೃಷ್ಣ: ಅವರು ಸುಮ್ಮನೆ ಕುಳಿತಿದ್ದಾರೆ. ಅವರನ್ನು ಏಕೆ ಎಳೆದಾಡುತ್ತೀರಿ? ಉಪಾಧ್ಯಕ್ಷರೇ, ಈಗ ಆರೂವರೆಯಾಯಿತು. ಸಭೆ ಆರು ಗಂಟೆಯವರೆಗೆ ಎಂದು ನಾನು ತಿಳಿದುಕೊಂಡಿದ್ದೆ. ಬೈರೇಗೌಡರ ಒತ್ತಾಯಕ್ಕೆ ಇನ್ನೂ ಅರ್ಧ ಗಂಟೆ ಜಾಸ್ತಿ ಕೂತ ಹಾಗೆ ಆಯಿತು.

12. ಪ್ರಕಟಣೆ

ಉಪಾಧ್ಯಕ್ಷರು: ದಿನಾಂಕ 7ನೇ ಮಾರ್ಚ್ 2003ರ ಶುಕ್ರವಾರದಂದು 70ನೇ ಕನ್ನಡ ಸಾಹಿತ್ಯ ಸಮ್ಮೇಳನವು ಬೆಳಗಾವಿಯಲ್ಲಿ ನಡೆಯಲಿರುವುದರಿಂದ ಹಾಗೂ ಸದರಿ ಸಮ್ಮೇಳನದಲ್ಲಿ ಅನೇಕ ಮಾನ್ಯ ಸದಸ್ಯರುಗಳು ಭಾಗವಹಿಸಲು ಇಚ್ಛಿಸಿರುವುದರಿಂದ ಅವರುಗಳ ಅನುಕೂಲಕ್ಕಾಗಿ, ಪುನಃ ಸೋಮವಾರ, ದಿನಾಂಕ 10ನೇ ಮಾರ್ಚ್ 2003ರಂದು ಬೆಳಿಗ್ಗೆ 11.00 ಗಂಟೆವರೆಗೆ ಸದನವನ್ನು ಮುಂದೂಡಲಾಗಿದೆ.

(ಸದನವು ಸಂಜೆ 6 ಗಂಟೆ 30 ನಿಮಿಷಕ್ಕೆ ಮುಂದೂಡಲ್ಪಟ್ಟು, ಪುನಃ ದಿನಾಂಕ 10ನೇ ಮಾರ್ಚ್ 2003ರ, ಸೋಮವಾರದಂದು ಬೆಳಿಗ್ಗೆ 11.00 ಗಂಟೆಗೆ ಸೇರಲು ನಿಶ್ಚಯಿಸಿತು)

(+ಈ ಚಿಹ್ನೆ ಮಾನ್ಯ ಸದಸ್ಯರ ಟಿಪ್ಪಣಿ ಅಥವಾ ಭಾಷಣವನ್ನು ಪರಿಷ್ಕರಿಸಿಲ್ಲ ಎಂದು ಸೂಚಿಸುತ್ತದೆ)